SRI C. J. MUCKANNAPPA.—What is the sanctity that is attached to the Bill to be passed to-day only ? How will it lose the sanctity if it is passed on the 2nd ?

MR. SPEAKER.—All I can do is to gather the sence of the House and then decide.

Sri V. M. DEO (Gubbi).—I agree with the suggestion of Sri Muckannappa. I do not think the Hon'ble Minister will find it inconvenient to reply on the 2nd.

Sri V. S. PATIL.—Let us proceed with work. We have spent ten minutes without any work.

Mr. SPEAKER.—I am not happy over this situation.

Sri VEERENDRA PATIL.—Let us finish the Bill today as has already been agreed to. I do not require more than half-an-hour to reply and half-an-hour for amendments may be sufficient. If necessary, we can sit till 7 P.M. to-day and finish the Bill.

Sri B. D. JATTI.—On our side, nobody is going to speak. It is upto the other Side to adjust. Let one or two Member speak. Our Minister will require only half-an-hour to reply.

Mr. SPEAKER.—Even then, there are eleven amendments. We may require eight minutes for each amendment.

Sri B. D. JATTI.—It is left to the Hon'ble Speaker. If we are to sit for half-an-hour more, we are prepared.

Mr. SPEAKER.—I cannot create more time, out of one hour.

Sri V. S. PATIL.—I request the Member on this Side to be as brief as possible and see that the Bill is finished to-day. We have already wasted 15 minutes. Let us start the work.

Mr. SPEAKER.—Nobody has got the time extended. Two hours are over.

AN HON'BLE MEMBER.—I suggest that the time be extended.

Sri B. D. JATTI.—We have no objection for any decision that the Hon'ble Speaker takes.

Sri SIDDIAH KASIMATH (Shirhatti).—As suggested by the Hon'ble Minister for Public Works, let the time be extended upto 7 P.M.

Mr. SPEAKER.—What depresses me is the cloudy atmosphere becoming more cloudy and muddier and muddier. Why should we work in such an atmosphere? All along, from the 2nd of December, we have worked more gloriously.

Sri V. S. PATIL.—I am requesting the Members on this side to be as brief as possible and try to finish up this Bill to-day.

Mr. SPEAKER.—I will give 20 minutes for all the Members who are desirous to speak. At 5-15 P.M., I will call upon the Hon'ble Minister to reply.

AN HON'BLE MEMBER.—Some more time may be given for the Member to speak.

Mr. SPEAKER.—If this bargaining, to satisfy every Member, is to go on, I am half inclined to adjourn the House.

Sri V. S. PATIL.—I am requesting on your behalf that our Members may be as brief as possible and try to finish the Bill to-day only.

(CHAIRMAN Smt. BASAVARAJESWARI in the Chair.)

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರೇ, ಈಗತಾನೇ ತಾವು ಅಪ್ಪಣೆ ಕೊಡಿಸಿದ ಹಾಗೆ ಕತ್ತಲು ಕವಿದಿದೆ, ಮೋಡ ಮುಸುಕಿದೆ. ಇಂಥ ಸಂದರ್ಭದಲ್ಲಿ ನನಗೆ ಮಾತನಾಡಬೇಕೆಂದು ಅಪ್ಪಣೆ ಕೊಟ್ಟಿದ್ದೀರಿ.

ಇವತ್ತು ಕೊನೆ ದಿನ, ಅವಸರ ಅವಸರವಾಗಿ ಈ ವಿಧೇಯಕವನ್ನು, ಈ ಕರಡು ವಿಧೇಯಕ ವನ್ನು ಕಾನೂನು ಮಾಡಿಕೊಂಡು ಯಾರಿಗೆ ಅನುಕೂಲ ಮಾಡಬೇಕು ಎಂದು ಸರ್ಕಾರಕ್ಕೆ ಇಚ್ಛೆ ಯೋ ನನಗಂತೂ ಅರ್ಥವಾಗುವುದಿಲ್ಲ. 1957 ರಲ್ಲಿ ಪಾಸಾದ ಕಾನೂನನ್ನು ಏಕೆ ಕಾರ್ಯಗತ ಮಾಡಲಿಲ್ಲ ಎಂದು ಕೇಳಿದಾಗ ಅದಕ್ಕೆ ತೊಂದರೆ ಇತ್ತು ಎಂದು ಹೇಳಿದರು. 1961ರಲ್ಲಿ ಅಂಗೀ ಕಾರವಾದ ತಿದ್ದುಪಡಿಗಳನ್ನು ಏಕೆ ಕಾರ್ಯಗತ ಮಾಡಲಿಲ್ಲ ಎಂದು ಕೇಳಿದರೆ ಅದಕ್ಕೂ ತೊಂದರೆ ಇತ್ತು ಎಂದು ಹೇಳಿದರು. 1963ರಲ್ಲಿ ಮತ್ತೊಂದು ತಿದ್ದುಪಡಿಯನ್ನು ತಂದಿದ್ದಾರೆ. ಇದರ ವಿಷಯ ಕೇಳಿದಾಗ ಅವೆರಡನ್ನೂ ಕಾರ್ಯಗತ ಮಾಡಲಿಲ್ಲವಾದ್ದರಿಂದ ಇದನ್ನು ಈವಾಗ ತೆಗೆದುಕೊಂಡು ಬಂದಿದ್ದೇವೆ, ಇದಕ್ಕೆ ಅಂಗೀಕಾರ ಕೊಡಿ, ಕಾರ್ಯಗತ ಮಾಡುತ್ತೇವೆ ಎಂದು ಸಂಬಂಧಪಟ್ಟ ಮಂತ್ರಿ ಗಳು ಈಗತಾನೇ ಅಪ್ಪಣೆ ಕೊಡಿಸಿದರು. ನನ್ನ ಸ್ನೇಹಿತರಾದ ವಿ. ಎಸ್. ಪಾಟೀಲರು ಪಬ್ಲಿಕ್ ಅಕೌಂಟ್ಸ್ ಸಮಿತಿ ವರದಿಯನ್ನು ಓದಿ, ಇಷ್ಟು ಹಣವನ್ನು ವೆಚ್ಚ ಮಾಡಿ ಅಧಿಕಾರಿಗಳನ್ನು ನೇಮಕ ಮಾಡಿಕೊಂಡೂ ಸಹ ಕಾನೂನನ್ನು ಕಾರ್ಯಗತ ಮಾಡದೆ ಇದ್ದೀರಿ, ಇಂಥ ಕಾನೂನನ್ನು ಶಾಸನ ಕಡತದಲ್ಲಿಟ್ಟು ಏನು ಪ್ರಯೋಜನ ಎಂದು ಕೇಳಿದರೆ ಅದಕ್ಕೆ ಯಾರೂ ಮಾತನಾಡಲಿಲ್ಲ. ಯಾರೂ ಚಕಾರ ಎತ್ತಲಿಲ್ಲ. ಈ ಕಾನೂನಿನಿಂದ ಈ ದೇಶದ ಜನತೆಗೆ ಒಳ್ಳೆಯದಾಗುವುದಿಲ್ಲ. ಇವತ್ತು ಇದರಿಂದ ಎಷ್ಟು ಜನಗಳಿಗೆ ಯಾವ ರೀತಿಯ ಅನ್ಯಾಯವಾಗುತ್ತದೆ ಎಂಬುದನ್ನು ಸರ್ಕಾರ ಸ್ವಲ್ಪ ಯೋಚನೆ ಮಾಡಬೇಕಾಗಿತ್ತು. ಭೂಮಿಯಲ್ಲಿ ಯಾವನು ಬೆಳೆಯನ್ನು ತೆಗೆಯುತ್ತಾನೆ, ಯಾವನು ಅದನ್ನೇ ನಂಬಿಕೊಂಡು ಭೂಮಿಯಲ್ಲಿ ಬೆಳೆಯನ್ನು ತೆಗೆಯುವುದಕ್ಕೋಸ್ಕರ ನೀರು ಬೇಕು ಎಂದು ಕೇಳುತ್ತಾನೆ, ಅಂಥವನು ಈ ಕಾನೂನು ಜಾರಿಗೆ ಬಂದಮೇಲೆ ಎಕರೆಗೆ ಸುಮಾರು ಒಂದು ಸಾವಿರ ರೂಪಾಯಿವರೆಗೂ ಹೆಚ್ಚಿನ ತೆರಿಗೆಯನ್ನು ಕೊಡಬೇಕಾಗುತ್ತದೆ. ಈ ರಾಜ್ಯದಲ್ಲಿ ನಾವು ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಮುಗಿಸಿ ಮೂರನೆಯ ಪಂಚವಾರ್ಷಿಕ ಯೋಜನೆಯ ಮೂರನೆಯ ವರ್ಷದಲ್ಲಿದ್ದೇವೆ. ಆದರೂ ಕೂಡ ಭೂಮಿಯನ್ನು ನಂಬಿಕೊಂಡಿರುವವನು ಇದ್ದಹಾಗೆಯೇ ಇದ್ದಾನೆ. ಭೂಮಿಯಲ್ಲಿ ಉತ್ಪಾದನೆ ಮಾತ್ರ ಜಾಸ್ತಿಯಾಗಿಲ್ಲ. ಮೊನ್ನೆ ತಾನೆ ಇರ್ರಿಗೇಷನ್ ಬಿಲ್ ಪಾಸಾಗಿದೆ, ಈಗ ಈ ತಿದ್ದುಪಡಿ ಕಾನೂನನ್ನು ತಂದಿದ್ದೀರಿ. ಇವನ್ನೆಲ್ಲ ಮಾಡಿಕೊಂಡು ಎಷ್ಟರಮಟ್ಟಿಗೆ ಈ ರಾಜ್ಯ ದಲ್ಲಿ ಆಹಾರ ಬೆಳೆಯುತ್ತೀರಿ ಎಂದು ನಾನು ಕೇಳುತ್ತೇನೆ.

5-00 P. M.

ಇವತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಇದೇ ರೀತಿ ಅಪ್ಪಣೆ ಕೊಡಿಸಿದರು. ಹಣ ಸ್ವಾಧೀನ ಮಾಡಿದ್ದಾರೆಂದು ಅವರು ಹೇಳಿದರು. ಎಂಟೂವರೆ ಕೋಟಿ ರೂಪಾಯಿ ಕೇಂದ್ರ ಸರ ಕಾರದಿಂದ ಬರತಕ್ಕದ್ದು ಇದೆ ಅದಕ್ಕಾಗಿ ಪ್ರಯತ್ನ ಮಾಡುತ್ತಿದ್ದೇವೆಂದು ಹಣಕಾಸಿನ ಮಂತ್ರಿಗಳು ಹೇಳಿದರು. ಒಟ್ಟಿನಲ್ಲಿ 12 ಕೋಟಿ ಕಡಿಮೆ ಬರುತ್ತಾ ಇದೆ. ಯಾವ ರೀತಿ ಇದನ್ನು ಶೇಖರಿಸು ತ್ತೀರಿ ? "some means" ಅಂದರೆ ಕಂದಾಯ ಹಾಕುತ್ತೀರಾ ? ಹಣ ಸಂಪಾದನೆಗಾಗಿ ಬಡ ರೈತರ ಮೇಲೆ ತೆರಿಗೆ ಹಾಕುತ್ತೇವೆಂದು ಹೇಳಿದರೆ ಇದರಿಂದ ಯಾರಿಗೆ ಪ್ರಯೋಜನವಾಗುತ್ತದೆ? ಯಾರ ಕಲ್ಯಾಣಕ್ಕೋಸ್ಕರ ಇದನ್ನು ಮಾಡುತ್ತೀರಿ ? ಇಂಥ ಕಾನೂನು ಪಾಸ್ ಮಾಡುವುದು ಯಾರ ಹಿತಕ್ಕೋಸ್ಕರವಾಗಿ ? ಈ ರೀತಿ ಮಾಡುವುದಾದರೆ ಕೆರೆ ಕಟ್ಟೆ ಮಾಡುವುದು ಬೇಡ ಎಂದು ಹೇಳುವ ಪರಿಸ್ಥಿತಿ ಬರುತ್ತದೆ. ಇನ್ನೊಂದು ಕಡೆ ಅನ್ನ ಆಹಾರಕ್ಕಾಗಿ ಜೋಳಿಗೆ ಹಾಕಿಕೊಂಡು ಅಮೇರಿಕ ದೇಶಕ್ಕೆ ಹೋಗುತ್ತಿದ್ದೀರಿ. ಇಂದು ದೇಶದಲ್ಲಿ ಎಷ್ಟು ಆಹಾರ ಬೆಳೆಯುತ್ತಿದೆ ಸಾಗುವಳಿಗೆ ಬಂದಿರ ತಕ್ಕ ಭೂಮಿ ಎಷ್ಟು ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಮಕ್ಕಳ ಸ್ಕೂಲ್ ಕಾಲೇಜ್ ಫೀಜ್ ಕಡಿಮೆ ಮಾಡಿ ಎಂದು ಹೇಳಿದರೆ ಸರಕಾರದ ಹತ್ತಿರ ಹಣ ಇಲ್ಲ ಎಂದು ಹೇಳುತ್ತೀರಿ. ಆದರೆ ಶರಾವತಿ ಪ್ರಾಜೆಕ್ಟಿನಲ್ಲಿ ಕಂಟ್ರಾಕ್ಟುದಾರರಿಗೆ 40 ಲಕ್ಷ, 30 ಲಕ್ಷ ಹಣ ಹೆಚ್ಚಿಗೆ ಕೊಡುತ್ತಿದ್ದೀರಿ. ಹಾಗಾದರೆ ಏತಕ್ಕೋಸ್ಕರ ಈ ತೆರಿಗೆ ಹಾಕುತ್ತಿದ್ದೀರಿ? ನಿಮಗೆ ಅಧಿಕಾರ ಇದೆ ಎಂದು ಕಸಕ್ಕೆ ಕಡಿಮೆಮಾಡಿ ಕಾಲ ಕೆಳಗೆ ಹಾಕಿ ತುಳಿದರೆ ಇದರಿಂದ ನಿಮಗೆ ಎಂದಿಗೂ ಕಲ್ಯಾಣವಾಗುವುದಿಲ್ಲ. ನಿಮ್ಮ ಯೋಜನೆಯಿಂದ ಶ್ರೀಮಂತರಿಗೆ ಮಾತ್ರ ಅನುಕೂಲವಾಗುತ್ತಿದೆ. ನೀವು ಕೊಡುವ ಹಣ ಶ್ರೀಮಂತರಿಗೆ ದೊರೆಯು ತ್ತಿದೆ. ಬಡ ರೈತನು ಕಂದಾಯ ಕೊಡುವುದಕ್ಕಾಗುವುದಿಲ್ಲ. ಕೆಲಸ ಕಾರ್ಯಗಳಿಲ್ಲದೆ ಬಡವನು ನಿರುದ್ಯೋಗಿ ಆಗಿದ್ದಾನೆ. ಇದರಿಂದ ಸರಕಾರಕ್ಕೆ ಒಳ್ಳೆಯದಾಗುವುದಿಲ್ಲ. ಮಕ್ಕಳಿಗೆ ಫೀಜ್ ಕಡಿಮೆ ಮಾಡಬೇಕು ಎಂದು ಕೇಳಿಕೊಂಡರೆ ಹಣವಿಲ್ಲ ಎಂದು ಹೇಳುತ್ತಿದ್ದೀರಿ. ಮಕ್ಕಳಿಗೆ ಬಹಳ ಅನ್ಯಾಯ ಮಾಡುತ್ತಿದ್ದೀರಿ. 14 ಲಕ್ಷ ರೂಪಾಯಿ ಕೊಡುವುದಕ್ಕಾಗುವುದಿಲ್ಲವೇ ? ಆಡಳಿತ

ಸೂತ್ರ ವಹಿಸಿಕೊಂಡು ವ್ಯವಹಾರ ಮಾಡತಕ್ಕಂಥ ನಿಮಗೆ ಒಂದು ಮಾತು ನಾನು ಹೇಳುತ್ತೇನೆ. ನಿಮ್ಮ ಘಟಪ್ರಭಾ, ಮಲಪ್ರಭಾ, ಕೃಷ್ಣ ಯೋಜನೆಗಳು ನಮಗೆ ಬೇಡ, ನಮ್ಮ ಹಳೇ ಮೈಸೂರು ರಾಜ್ಯ ಮೊದಲು ಹೇಗೆ ಇತ್ತೋ ಹಾಗೆ ಇರಲಿ. ಹೊಸ ಮೈಸೂರು ಬೇರೆಯಾಗಲಿ. ಈ ಮೈಸೂರು ರಾಜ್ಯದಲ್ಲಿ ಎರಡು ತುಂಡು ಆಗಲಿ ಎಂದು ಬಹಳ ನೊಂದ ಮಾನಸ್ಸಿನಿಂದ ಹೇಳುತ್ತೇನೆ. ಆಮೇಲೆ ಬೇಕಾದರೆ ಅಪ್ಪರ್ ಕೃಷ್ಣ ತುಂಗಭದ್ರಾ ಯೋಜನೆಗಳನ್ನು ಮಾಡಿಕೊಳ್ಳಬಹುದು. ಆದುದರಿಂದ ಈ ಕಾನೂನು ತರುವುದು ಬೇಡ. ಈ ಕಾನೂನು ಮೂಲಕ ಹಳೇ ಮೈಸೂರು ಜನತೆಗೆ ನರಕವಾಸ ಉಂಟಾಗುತ್ತದೆ ಎಂದು ಹೇಳುತ್ತೇನೆ. ಇಂಥ ಯಾವ ಕಾನೂನನ್ನೂ ಶಾಸನ ಮಾಡಬೇಡಿ ಎಂದು ಹೇಳುತ್ತೇನೆ, ನೀವು ಒಳ್ಳೇ ಕಾನೂನು ತಂದರೆ ಅದಕ್ಕೆ ಬೆಂಬಲ ಕೊಡುತ್ತೇನೆ. ಇಂಥ ಕಾನೂನು ತಂದು ಮೂಕ ಪ್ರಾಣಿಗಳಂತಿರುವ ಬಡ ರೈತರ ಮೇಲೆ ತೆರಿಗೆ ಹೊರೆ ಹೊರಿಸಲಾಗುತ್ತಿದೆ. ಇದು ಸರಿಯಲ್ಲ. ಯಾಕೆಂದರೆ ರೈತರ ವರ್ಗಕ್ಕೆ ಬಹಳ ಆಘಾತವಾಗುತ್ತಿದೆ. ಒಂದು ಎಕರೆ ಜಮೀನಿನಲ್ಲಿ ಒಂದು ಸಾವಿರ ರೂಪಾಯಿ ಬೆಳೆ ರೈತನಿಗೆ ಬರುವುದಿಲ್ಲ. ಅನೇಕ ಸಲ ಬೆಳೆಗೆ ರೋಗ ಬಂದು ಹಾಳಾಗುತ್ತದೆ. ಆದರೆ ಬೆಟರ್‌ಮೆಂಟ್ ಲೆವಿ ಕೊಡಲೇಬೇಕಾಗುತ್ತದೆ. ವ್ಯವಸಾಯ ಮಾಡುವುದು ಬೇಡ ಎನ್ನುವ ಪರಿಸ್ಥಿತಿ ರೈತನಿಗೆ ಬರುತ್ತದೆ. ಈ ಸಂದರ್ಭದಲ್ಲಿ ವ್ಯವಸಾಯ ಮಾಡುವವರು ಇನ್ನು ಮುಂದೆ ದೇಶದಲ್ಲಿ ಉಳಿಯುವುದಿಲ್ಲ ಎಂದು ಹೇಳಬೇಕಾಗುತ್ತದೆ. ಆದುದರಿಂದ ಈ ಕಾನೂನು ಶಾಸನ ಕಡತಕ್ಕೆ ಏರಿಸುವುದು ಸೂಕ್ತವಲ್ಲ ಎಂದು ಹೇಳುತ್ತೇನೆ. ಅದರಲ್ಲಿಯೂ ಹಳೇ ಮೈಸೂರಿಗೆ ಇದನ್ನು ಅನ್ವಯಿಸಬೇಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಹಳೇ ಮೈಸೂರಿನಲ್ಲಿ ಎಷ್ಟು ಹಣ ಖರ್ಚಾಗುತ್ತಿದೆ ಎಂಬುದನ್ನು ಲೆಕ್ಕಾಚಾರ ಮಾಡಿ ನೋಡಿದರೆ ಒಂದು ಕೋಟಿ ರೂಪಾಯಿ ವೆಚ್ಚದ ಅಂದಾಜಿನ ಒಂದು ಪ್ರಾಜೆಕ್ಟು ಸಹ ಇಲ್ಲ. 50 ಲಕ್ಷ ರೂಪಾಯಿವರೆಗಿನ ಒಂದು ಕೆರೆ ಸಹ ಇಲ್ಲ, 25 ಲಕ್ಷ ಖರ್ಚು ಮಾಡುವುದಕ್ಕೆ ನಿಮಗೆ ಚೈತನ್ಯವಿಲ್ಲ. ದೇಶದ ಹಣವೆಲ್ಲಾ ಖರ್ಚಾಗುತ್ತಿರುವುದು ತಮ್ಮ ಭಾಗದಲ್ಲಿ ಅನುಕೂಲ ಮಾಡಿಕೊಡುವುದಕ್ಕೆ ಅಭಿವೃದ್ಧಿಪಡಿಸುವುದಕ್ಕೆ ಅಪ್ಪರ್ ಕೃಷ್ಣ, ಘಟಪ್ರಭಾ, ಮಲಪ್ರಭಾ ಇಂಥ ಯೋಜನೆಗಳಿಗಾಗಿಯೇ ಇದೆ. ಅವುಗಳಿಗೆ ಅನ್ವಯಿಸುವ ಹಾಗೆ ಬೇರೆ ಒಂದು ಕಾನೂನು ಮಾಡಿಕೊಂಡರೆ ಎಷ್ಟೋ ಹಣ ನೀವು ಪಡೆಯಬಹುದು. ಆ ರೀತಿ ಪ್ರಯತ್ನ ಮಾಡುವುದು ಒಳ್ಳೆಯದು. ಆದಕಾರಣ ಇಡೀ ಮೈಸೂರು ರಾಜ್ಯಕ್ಕೆ ಇದನ್ನು ಅನ್ವಯ ಮಾಡಬೇಡಿ ಎಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ. ಮೇಜರ್ ಮತ್ತು ಮೈನರ್ ಇರಿಗೇಷನ್‌ನಲ್ಲಿ ಕೆರೆಗೆ ನೀರು ಬರಲಿ ಬಾರದೇ ಇರಲಿ ಎರಡು ತಿಂಗಳು ನೀರು ಕೊಟ್ಟರೆ ತೆರಿಗೆ ವಸೂಲ್ಮಾಡಲಾಗುವುದು. ಕೆರೆಗೆ ನೀರು ಬರುವುದಕ್ಕೆ ಏನಾದರೂ 'ಆರ್ಟಿಫಿಷಿಯಲ್ ರೇನ್' ಬರುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ಎಂಬುದನ್ನು ಯೋಚನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದಲ್ಲದೆ ಕೆರೆ ರೆಸ್ಟೋರೇಷನ್ ಮಾಡುವುದಕ್ಕೆ ಕಾಂಟ್ರಿಬ್ಯೂಷನ್ ಈ ಮೊದಲೇ ಕೊಟ್ಟುಬಿಟ್ಟಿದ್ದಾರೆ. ಈಗ 500 ರೂಪಾಯಿ ರೇಟ್ ಕೊಡಬೇಕಾಗುತ್ತದೆ. ಸ್ಪೆಷಲ್ ಇಂಟರೆಸ್ಟ್ 25 ರೂಪಾಯಿ ಹಾಗೂ ಮೈನರ್ ಇರಿಗೇಷನ್‌ನಲ್ಲಿ ಹನ್ನೆರಡೂವರೆ ರೂಪಾಯಿ ಕೊಡುವುದು ನ್ಯಾಯವೇ ಎಂದು ಕೇಳುತ್ತೇನೆ. ಒಂದು ಎಕರೆ ಭೂಮಿಯಲ್ಲಿ ಭತ್ತ ಬೆಳೆದರೆ ರೈತನಿಗೆ ಇನ್ನೂರು ರೂಪಾಯಿವರೆಗೆ ದೊರೆಯುತ್ತದೆ. ಇಂಥ ಪರಿಸ್ಥಿತಿಯಲ್ಲಿ ರೈತ ಕಂದಾಯ ಕೊಡುವುದು ಹೇಗೆ? ಅವನು ಏನು ಮಾಡಬೇಕು ಎಂಬುದು ಅರ್ಥವಾಗುವುದಿಲ್ಲ ಆದುದರಿಂದ ಈ ಅಂಶವನ್ನು ಸರಕಾರ ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ನಾನು ಹೇಳುತ್ತೇನೆ. ಇದು ಬಹಳ ತೊಂದರೆಯಾಗುತ್ತದೆ, ಸ್ಕ್ಯಾಂಟಿ ರೇನ್‌ಫಾಲ್ ಪ್ರದೇಶದಲ್ಲಿ ಯಾವ ರೀತಿ ಮಾಡುತ್ತೀರಿ ? ಪಿಕ್-ಅಪ್ ನಾಲೆ ಇರುತ್ತದೆ ಅದರಲ್ಲಿ ನೀರು ಬರುವುದಿಲ್ಲ ಹತ್ತಾರು ವರ್ಷಗಳಿಂದ ಬರುತ್ತಾ ಇರುವುದಿಲ್ಲ. ಅಂತಹ ಕಡೆ ಯಾವ ರೀತಿ ವಸೂಲು ಮಾಡುತ್ತೀರಿ ? ಇದು ನಮಗೆ ಇದರಲ್ಲಿ ಅರ್ಥವಾಗುವುದಿಲ್ಲ. ಆತುರ ಆತುರವಾಗ ಹಣ ಬರುತ್ತದೆ ಎಂದು ಇದನ್ನು ಪಾಸ್ ಮಾಡಿಸಿಕೊಂಡು ಜನತೆಗೆ ಹಿಂಸೆ ಕೊಡುವುದಕ್ಕೆ ಬದಲಾಗಿ ಇದನ್ನು ಫೆಬ್ರವರಿಯಲ್ಲಿ ಪುನಃ ಇದನ್ನು ತೆಗೆದುಕೊಂಡು ಬನ್ನಿ, ಅದಕ್ಕೆ ಮುಂಚೆ ಜನಾಭಿಪ್ರಾಯ ತೆಗೆದುಕೊಳ್ಳಿ ಇದು ಒಂದು ಸಣ್ಣ ತಿದ್ದುಪಡಿಯಾದರೂ ಕೂಡ ಜನತೆಗೆ ಬಹಳ ಅನಾನುಕೂಲ ಮಾಡುತ್ತದೆ, ಹಿಂಸೆ ಮಾಡುತ್ತದೆ. ಇದನ್ನು ತಪ್ಪಿಸುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ. ಕೃಷ್ಣರಾಜಸಾಗರ ಒಂದು ಬಿಟ್ಟರೆ ಇನ್ನೆಲ್ಲೂ ಕೂಡ 25 ಲಕ್ಷ 30 ಲಕ್ಷ ರೂಪಾಯಿ ಖರ್ಚು ಮಾಡಿ ಕಟ್ಟಿರತಕ್ಕ ಕೆರೆ, ಚಾನಲ್ ಯಾವುದೂ ಕೂಡ ನಮ್ಮಲ್ಲಿ ಇಲ್ಲ ಆದ್ದರಿಂದ ಅಂತಹ ಒಂದು ದೊಡ್ಡ ಮನಸ್ಸು ಮಾಡಿ ನಮ್ಮನ್ನು ಬಿಟ್ಟುಬಿಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲೂ ಮತ್ತು ಮಾನ್ಯ ಮಂತ್ರಿಗಳು ಹೇಳಿದ್ದರಲ್ಲೂ ಈ ಬಿಲ್ಲು ಸೈಂಟಿಫಿಕ್ ಆಗಿ ಮಾಡಿಲ್ಲ ಎನ್ನುವುದು ಬಹಳ ಚೆನ್ನಾಗಿ ಎದ್ದು ಕಾಣುತ್ತಾ ಇದೆ. ಬೆಟರ್‌ಮೆಂಟ್ ಚಾರ್ಜಸ್ ಮತ್ತು ಸ್ಪೆಷಲ್ ಬೆಟರ್‌ಮೆಂಟ್ ಚಾರ್ಜಸ್ ಹಾಕಬೇಕಾದರೆ ಮುಖ್ಯವಾದ ಕಾರಣವೇನೆಂದರೆ ಪ್ರಾಜೆಕ್ಟು

(ಶ್ರೀ ವಿ. ಎಂ. ದೇವ್)

ಗಳನ್ನು ಕಟ್ಟಲಿಕ್ಕೆ ಬಹಳ ಹಣ ಖರ್ಚಾಗುತ್ತದೆ ಆದ್ದರಿಂದ ಈ ರೀತಿ ಹಣವನ್ನು ವಸೂಲು ಮಾಡಬೇಕಾಗುತ್ತದೆ ಎಂದು ಹೇಳಿದರು, ಅದನ್ನು ಯಾವ ಆಧಾರದ ಮೇಲೆ ವಸೂಲು ಮಾಡುತ್ತಾರೆ ಎಂಬುದನ್ನು ಯೋಚನೆ ಮಾಡಿದಾಗ ಇಳುವರಿ ಮೇಲೆ ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ನೀರಾವರಿ ಕಾಂಗಾರಿಗೆ ಖರ್ಚಾಗುವುದಕ್ಕೂ ಹೆಚ್ಚು ಉತ್ಪಾದನೆ ಆಗುವುದಕ್ಕೂ ಮತ್ತು ಈ ಬಿಲ್ಲು ತಂದಿರುವುದಕ್ಕೂ ಒಂದಕ್ಕೊಂದಕ್ಕೆ ನಿಕಟವಾದ ಸಂಬಂಧವಿದೆ ಎಂಬುದು ಮುಖ್ಯವಾದ ಅಂಶ ಆ ದೃಷ್ಟಿಯಿಂದ ಹೇಳುತ್ತೇನೆ. ಪಂಚಾಯ್ತಿ ರಾಜ್ಯ ಹೇಗೆ ಮಾಡಬೇಕು ಎನ್ನುವುದರ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಆದೇಶ ಏನಿದೆ ಎಂಬುದನ್ನು ನೋಡಿದ್ದೇ ಆದರೆ ಅದರಲ್ಲಿ ಪಂಚಾಯ್ತಿಯ ಆರ್ಥಿಕ ಬೆಳವಣಿಗೆ ಯಾವ ರೀತಿ ಕೆಲಸ ಮಾಡಬೇಕೆಂಬುದನ್ನು ಹೇಳಿದ್ದಾರೆ. ಸ್ಥಳೀಯ ಸಂಸ್ಥೆಗಳಿಗೆ ಬರುವ ವರಮಾನವನ್ನು ತೆಗದುಕೊಂಡು ಪಂಚಾಯ್ತಿಗಳಿಗೆ ಹಂಚಿ ಎಂದು ಹೇಳುವಾಗ ಇಂತಹ ಬಿಲ್ಲುಗಳಿಂದ ಅಲ್ಲಿ ತೂಕಡಿಸುವುದಕ್ಕೆ ಒಂದು ದಾರಿಯಾಗುತ್ತದೆ. ಈ ಬಿಲ್ಲನ್ನು ಈ ಅಸೆಂಬ್ಲಿಯಲ್ಲಿ ತರುವುದಕ್ಕಿಂತ ಮುಂಚೆ ಪಂಚಾಯ್ತಿ ರಾಜ್ಯದ ಬಿಲ್ಲು ವಿಚಾರ ವಿನಿಮಯಮಾಡಿ ನಂತರ ತಂದಿದ್ದರೆ ಚೆನ್ನಾಗಿತ್ತು ಎಂದು ನಾನು ಹೇಳುತ್ತೇನೆ.

ನೀವು ಕೆರೆಗಳನ್ನು ಕಟ್ಟಿಸುವಾಗ ಡಿಪಾರ್ಟ್‌ಮೆಂಟಲ್ ಆಗಿ ಮಾಡಿಸಿದರೆ ಖರ್ಚು ಬಹಳ ಕಡಿಮೆಯಾಗುತ್ತದೆ ಮತ್ತು ಕಾಲ ಕೂಡ ಬಹಳ ಕಡಿಮೆ ತೆಗೆದುಕೊಳ್ಳುತ್ತದೆ. ನಮ್ಮಲ್ಲಿ ಬೋಚನಹಳ್ಳಿ ಕೆರೆ ಅಂತ ಇದೆ 70 ಸಾವಿರ ರೂಪಾಯಿ ಅಂದಾಜಾಗಿತ್ತು, ಕಟ್ಟಿ 3 ವರ್ಷ ಆಗಿದೆ ಆದರೆ ಇನ್ನೂ ಕೂಡ ಅದರಿಂದ ರೈತನಿಗೆ ಅನುಕೂಲವಾಗಿಲ್ಲ ನಷ್ಟವಾಗುತ್ತಾ ಇದೆ. ಈ ಬಿಲ್‌ನಿಂದ 2 ಕೋಟಿ ರೂಪಾಯಿ ಬರುತ್ತದೆ ಎಂದು ಹೇಳಿದ್ದೀರಿ, ಸ್ಥಳೀಯ ಸಂಸ್ಥೆಗಳಿಗೆ ಕಂದಾಯದ ಹಣವನ್ನೆಲ್ಲಾ ಕೊಟ್ಟಮೇಲೆ ಎಲ್ಲಿಂದ ಹಣ ಬರುತ್ತದೆ ? ಆದ್ದರಿಂದ ಪಂಚಾಯ್ತಿ ರಾಜ್ಯದ ರಿಪೋರ್ಟನ್ನು ವಿಮರ್ಶೆ ಮಾಡಿದ ಮೇಲೆ ಅದರ ಬೆಳಕಿನಲ್ಲಿ ಈ ಬಿಲ್ಲನ್ನು ತರಬೇಕಾಗಿತ್ತು ಎಂದು ನಾನು ಹೇಳುತ್ತೇನೆ. ಅದನ್ನು ಬಿಟ್ಟು ಈಗ ತಂದಿರುವುದು ಸರಿಯಲ್ಲ ಮತ್ತು ಆ ಪಂಚಾಯ್ತಿ ರಾಜ್ಯದ ಬಿಲ್ಲನ್ನು ಇದುವರೆಗೂ ತರದೇ ಇರುವುದು ಈ ಮಸೂದೆ ಅವಾಸ್ತವಿಕ ಅಲ್ಲದೇ ಈ ಸರ್ತಿ ಸಭೆ ಸೇರಿರುವುದೇ ಅರ್ಥಹೀನವಾಗಿದೆ.

ಇಲ್ಲಿಯವರೆಗೂ ನಡೆದಿರತಕ್ಕದ್ದು ಅರ್ಥವಿಲ್ಲದ......

ಅಧ್ಯಕ್ಷರು.—ಯಾವುದು ಅರ್ಥವಿಲ್ಲದ್ದು ?

ಶ್ರೀ ವಿ. ಎಂ. ದೇವ್.—ಇಲ್ಲಿ ನಡೆದ ಚರ್ಚೆಗಳು ಹಾಗೂ ಈಗ ಮಂಡಿಸಿರತಕ್ಕ ಮಸೂದೆ...

ಅಧ್ಯಕ್ಷರು.—ನಿಮಗೆ ಅರ್ಥವಾಗಿಲ್ಲ, ಅಷ್ಟೆ.

ಶ್ರೀ ವಿ. ಎಂ. ದೇವ್.—ನಾನು ಹೇಳುತ್ತಿರುವ ಮಾತಿಗೆ ಸರ್ಕಾರದವರು ತಲೆದೂಗುತ್ತಿದ್ದಾರೆ. ಅಷ್ಟೇ ಸಾಕು. ಇದರಿಂದ 20 ಲಕ್ಷ ಖರ್ಚು ಬರುತ್ತೆಂದು ಹೇಳಿದ್ದಾರೆ. ಅಷ್ಟು ಖರ್ಚು ಬರಲು ಸಾಧ್ಯವೇ ಇಲ್ಲ. ಇದರಲ್ಲಿ ಅರ್ಧ ಖರ್ಚು ಕಡಮೆಯಾಗುತ್ತದೆ. ಇದರಲ್ಲಿ ಸರ್ಕಾರಕ್ಕೆ ಐದನೇ ಒಂದು ಭಾಗ ನಷ್ಟವಾಗುತ್ತದೆ. ಶ್ರೀ ಮುಕ್ಕಣ್ಣಪ್ಪನವರು ಒಂದು ಕರ್ಣಾಟಕ ಬೇಡ ಎರಡಾಗಲಿ ಎಂದು ಹೇಳಿದ್ದು ಈ ತೊಂದರೆಗಳಿಗಾಗಿಯೇ. ಆದರೆ ನಾನು ಅದನ್ನು ಒಪ್ಪುವುದಿಲ್ಲ. ಇಂಥ ಮಸೂದೆಗಳಿಂದ ಭಾವೈಕ್ಯತೆ ಎಲ್ಲಿ ಬರುತ್ತದೆ? ಈಗ ಕಾಲವಲ್ಲ. ಇದನ್ನು ಜಾರಿಗೆ ಕೊಡುವುದು ಯುಕ್ತವಲ್ಲ ಎಂದು ಹೇಳುತ್ತೇನೆ. ಪಂಚಾಯಿತಿ ಬಿಲ್ ಪಾಸಾಗುವ ತನಕ ಇದನ್ನು ತರತಕ್ಕದ್ದು ಯುಕ್ತವಲ್ಲ ಎಂದು ಹೇಳುತ್ತೇನೆ. ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಗಳೇ : ಈಗ ಸಭೆಯ ಮುಂದಿರತಕ್ಕ ಇರಿಗೇಷನ್ ಲೆವಿಯ ಬಗ್ಗೆ ಸರ್ಕಾರಕ್ಕೆ ನಾನೀಗ ಒಂದೆರಡು ಸಲಹೆಗಳನ್ನು ಕೊಡಲು ನಿಂತಿದ್ದೇನೆ. ಮಾನ್ಯ ಮಂತ್ರಿಗಳು ಈ ಶಾಸನವನ್ನು ಜಾರಿಗೆ ತಂದರೆ ಎರಡು ಲಕ್ಷ ರೂಪಾಯಿಗಳ ಆದಾಯ ಬರುತ್ತದೆಂದು ತಿಳಿಸಿದ್ದಾರೆ. ಆದರೆ ಈಗ ಲೆವಿ ಮಾಡಿರತಕ್ಕ ಟ್ಯಾಕ್ಸನ್ನು ಕೊಡಬೇಕಾಗಿದ್ದರೇ ರೈತನಿಗೆ ಬಹಳ ಕಷ್ಟವಾಗಿರುತ್ತೆ. ಆದರೆ ಈ ಹಿಂದೆ ಮಾನ್ಯ ಮಂತ್ರಿಗಳು ಇದೇ ಸಭೆಯಲ್ಲೇ ಮಾತನಾಡುತ್ತಾ ನಮ್ಮ ರಾಜ್ಯದಲ್ಲಿ ಇರಿಗೇಷನ್ ಒಳಗಾಗಿರತಕ್ಕ ಜಮೀನಿನ ವಿಸ್ತೀರ್ಣ 100ಕ್ಕೆ 8 ಇದೆ ಎಂಬುದಾಗಿ ಹೇಳಿದ್ದರು. ಹೀಗೆ ನಮ್ಮ ರಾಜ್ಯದಲ್ಲಿ ನೂರಕ್ಕೆ ಎಂಟರಷ್ಟು ತರೀ ಬೇಸಾಯ ಬಹಳ ದಿವಸದಿಂದಲೂ ಅಷ್ಟಕ್ಕೇ ನಿಂತುಹೋಗಿದೆ. ಇದು ಮುಂದಕ್ಕೆ ಸಾಗಲು ಸಾಧ್ಯವಾಗದೆ ಅಷ್ಟಕ್ಕೇ ನಿಂತಿರುವಾಗ ಈಗ ಮತ್ತೆ ಆ ರೈತನ ಮೇಲೆ ಇನ್ನಷ್ಟು ತೆರಿಗೆ ಹಾಕಲು ಈಗ ಈ ಒಂದು ಬಿಲ್ಲನ್ನು ತಂದು ಸಭೆಯ ಅನುಮತಿಯನ್ನು ಪಡೆಯಲು ಹೊರಟಿದ್ದಾರೆ. ಆದರೆ ನಾನು

ಈ ಸಂದರ್ಭದಲ್ಲಿ ಸರ್ಕಾರದವರನ್ನು ಎರಡು ಪ್ರಶ್ನೆಯನ್ನು ಕೇಳಲಿಚ್ಛಿಸುತ್ತೇನೆ. ಈಗಾಗಲೇ ರೈತನ ಮೇಲೆ 5 ತರಹೆಯ ಕಂದಾಯಗಳನ್ನು ಹೇರಿದ್ದಾರೆ. ಇಷ್ಟು ಕಂದಾಯದ ಹೊರೆಯನ್ನು ರೈತ ಕೊಡಲಾರನೆಂಬುದನ್ನು ತಿಳಿದಿದ್ದಾಗ್ಗೂ ಈಗ ಮತ್ತೆ ಆತನ ಮೇಲೆ ಇನ್ನೂ ಮೂರು ತರಹೆಯ ಕಂದಾಯಗಳನ್ನು ಹಾಕಲು ಹೊರಟಿದ್ದಾರೆ. ಅಲ್ಲಿಗೆ ರೈತ ಇನ್ನು ಮುಂದೆ ಒಟ್ಟು 8 ರೀತಿಯಲ್ಲಿ ಕಂದಾಯವನ್ನು ಕೊಡಬೇಕಾಗುತ್ತದೆ. ಈ ಹಿಂದೆ ಟೆನೆನ್ಸಿ ಶಾಸನವನ್ನು ಜಾರಿಗೆ ತಂದಾಗ ಭೂ ಮಾಲೀಕನು ಭೂಮಿಯ ಉತ್ಪನ್ನದಲ್ಲಿ ಮೂರನೇ ಒಂದು ಭಾಗದ ಆದಾಯವನ್ನು ಮಾತ್ರ ಗೇಣಿದಾರನಿಂದ ಪಡೆಯಬೇಕೆಂದು ವಿಧಾಯಕ ಮಾಡಿದ್ದೀರಿ. ಆ ಮೂರನೇ ಒಂದು ಭಾಗದ ವರಮಾನ ಪಡೆಯತಕ್ಕವನ ಮೇಲೆ ಈಗ 8 ಬಗೆಯ ಕಂದಾಯವನ್ನು ಹೇರಲು ಹೊರಟಿದ್ದಾರೆ. ಇಂದು ರೈತ ಇಷ್ಟು ಭಾರವನ್ನು ಹೊರಲು ಅವನಿಗೆ ಶಕ್ತಿ ಇದೆಯೋ ಎಂಬುದನ್ನು ಆಲೋಚನೆ ಸಹಾ ಮಾಡಿದಂತೆ ಕಾಣುವುದಿಲ್ಲ. ರೈತನಿಗೆ ದಿನೇ ದಿನೇ ಒಂದೊಂದು ಕಾನೂನು ಬರುತ್ತಿರುವುದು ಅವನಿಗೆ ಇರತಕ್ಕ ಕಿರುಕುಳವನ್ನು ಹೆಚ್ಚಿಸುವುದಕ್ಕೇ ವಿನಾ ಆತನಿಗೆ ಇವುಗಳಿಂದೇನೂ ಪ್ರಯೋಜನವಿಲ್ಲ. ಇನ್ನು ಇದರ ಜೊತೆಗೆ ವ್ಯವಸಾಯದ ಕೂಲಿಗಾರರಿಗೆ ಮಿನಿಮಂ ಇಂತಿಷ್ಟು ಕೂಲಿಯನ್ನು ಕೊಟ್ಟೇ ಕೊಡಬೇಕೆಂದು ಒಂದು ಕಡ್ಡಾಯವನ್ನು ಬೇರೆ ಮಾಡಿದ್ದಾರೆ. ಇಷ್ಟೆಲ್ಲಾ ಕಿರುಕುಳವನ್ನು ಕೊಟ್ಟಿದ್ದಾಗ್ಯೂ ಇನ್ನೂ ಆತನ ಮೇಲೆ ತೆರಿಗೆಗಳನ್ನು ಹೇರುತ್ತಲೇ ಇರುವುದು ಖಂಡಿತ ಸರಿಯಾದ್ದಲ್ಲ. ಆದರೆ ಈ ಬಿಲ್ಲಿನಲ್ಲಿ ಈಗ ಒಂದು ತಿದ್ದುಪಡಿಯನ್ನು ಸೇರಿಸಿ ಒಂದು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಅಂದರೆ ಒಂದು ಲಕ್ಷ ರೂಪಾಯಿನೊಳಗೆ ವೆಚ್ಚವಾಗತಕ್ಕ ಕೆರೆಕಾಲ್ವೆಗಳ ಅಥವಾ ಒಂದು ಸಾವಿರ ಎಕರೆ ಅಚ್ಚುಕಟ್ಟಿರತಕ್ಕ ಕೆರೆಗಳ ಕೆಳಗಿನ ಜಮೀನುಗಳಿಗೆ ಇನ್ನು ಮುಂದೆ ಅವರು 8 ತಿಂಗಳುಕಾಲ ನೀರನ್ನು ಉಪಯೋಗಿಸಿದರೆ ಒಂದು ಎಕರೆಗೆ ವಾಟರ್ ರೇಟನ್ನು ಒಂದು ವರ್ಷಕ್ಕೆ 25 ರೂ.ಗಳು ಇಲ್ಲವೇ ನೀರನ್ನು 3 ತಿಂಗಳಿಗೆ ಮೇಲ್ಪಟ್ಟು 8 ತಿಂಗಳಿಗೆ ಕಡಿಮೆಯಾಗಿ ಉಪಯೋಗಿಸಿಕೊಂಡಲ್ಲಿ ಒಂದು ಎಕರೆಗೆ ಒಂದು ವರ್ಷಕ್ಕೆ ಹನ್ನೆರೆಡೂವರೆ ರೂಪಾಯಿಗಳನ್ನು ವಾಟರ್ ರೇಟನ್ನು ಕೊಡಬೇಕೆಂದು ಇದರಲ್ಲಿ ತಿಳಿಸಲಾಗಿದೆ. ಆದರೆ ಒಂದು ಸಾವಿರ ಎಕರೆಗೆ ಕೆಳಪಟ್ಟ ಅಚ್ಚುಕಟ್ಟಿಗೆ ಏನು ಮಾಡುತ್ತಾರೆಂಬುದನ್ನು ಇದರಲ್ಲಿ ತಿಳಿಸಿಲ್ಲ. ಈಗ 10-15 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿರತಕ್ಕ ಒಂದು ಕೆರೆಯ ಕೆಳಗಿನ ಜಮೀನಿಗೆ ವಾಟರ್ ರೇಟ್ ಯಾವ ರೀತಿ ಹಾಕಲಾಗುತ್ತದೆಂಬುದನ್ನು ತಿಳಿಸಿಲ್ಲ. ಈಗ ಭತ್ತದ ಬೆಳೆಗೆ ಸಾಮಾನ್ಯವಾಗಿ 3 ತಿಂಗಳಿಗಿಂತ ನೀರನ್ನು ಜಾಸ್ತಿಯಾಗಿ ಉಪಯೋಗಿಸಬೇಕಾಗುವುದು. ಆಗ ಅದಕ್ಕೂ ಈ ಸ್ಪೆಷಲ್ ಬೆಟರ್‌ಮೆಂಟ್ ಫೀಯನ್ನು ಲೆವಿ ಮಾಡುತ್ತಾರೆಂದು ಊಹಿಸುವುದಕ್ಕೆ ಇಲ್ಲಿ ಅವಕಾಶವಿದೆ. ಆದುದರಿಂದ ಮುಂದೆ ಈ ಲೆವಿಯನ್ನು ಎಲ್ಲಾ ಮೈನರ್ ಇರಿಗೇಷನ್ನುಗಳಿಗೂ ಇದನ್ನು ಅಳವಡಿಸುತ್ತಾರೆಂದು ನನಗೆ ಹೊಳೆಯುತ್ತಿದೆ. ಈಗ ಸರ್ಕಾರದವರಿಗೆ ಅಪ್ಪರ್ ಕೃಷ್ಣ, ಘಟಪ್ರಭ ಮತ್ತು ಮಲಪ್ರಭ ಪ್ರಾಜೆಕ್ಟುಗಳನ್ನು ನಿರ್ಮಾಣ ಮಾಡಲು ಸುಮಾರು 300 ಕೋಟಿ ರೂಪಾಯಿಗಳು ಬೇಕಾಗಿರುತ್ತದೆಂದು ಹೇಳಿದ್ದರು. ಅದಕ್ಕೆ ಈಗ ಇದನ್ನು ತಂದು ಇದರಿಂದ 2 ಕೋಟಿ ರೂಪಾಯಿಗಳನ್ನು ಪಡೆಯಬೇಕೆಂದು ಹೊರಟಿರುವಂತೆ ನನಗೆ ಭಾಸವಾಗುತ್ತಿದೆ, ಇಲ್ಲಿ ಮಾಡಬೇಕಾದ ಮೈನರ್ ಇರಿಗೇಷನ್ ಕೆಲಸಗಳು ಬೇಕಾದಷ್ಟು ಇರುತ್ತವೆ. ಈ ಮಸೂದೆ ಮುಂದೆ ಶಾಸನವಾದರೆ ಬಹಳ ಗೊಂದಲಕ್ಕೆ ಅವಕಾಶವಾಗುತ್ತದೆ. ರೈತರಿಗೆ ಇದರಿಂದ ತುಂಬಾ ತೊಂದರೆ ಇದೆ. ಈ ಮಸೂದೆಯಲ್ಲಿ ವಾಟರ್‌ರೇಟನ್ನು ಹಾಕತಕ್ಕ ಅಧಿಕಾರವನ್ನು ಸರ್ಕಾರದವರು ರಿಜರ್ವ್ ಮಾಡಿಕೊಂಡಿದ್ದಾರೆ. ನಾವು ಇದನ್ನು ಮುಂದಕ್ಕೆ ನಿಷ್ಕರ್ಷೆ ಮಾಡುತ್ತೇವೆಂದು ಹೇಳಿದ್ದಾರೆ. ಇದರಿಂದ ಮುಂದೆ ಬಹಳ ತೊಂದರೆ ಬರುತ್ತದೆ. ಸಣ್ಣ ಪುಟ್ಟ ಕೆರೆಗಳ ಕೆಳಗಿರತಕ್ಕ ರೈತರಿಗೆ ಇದರಿಂದ ತುಂಬಾ ತೊಂದರೆಯಾಗುತ್ತದೆ. ಸಣ್ಣ ಕೆರೆಗಳ ಕೆಳಗಿರತಕ್ಕ ರೈತರು ಕೊಡಬೇಕಾದ ರಾಯಲ್ಟಿ ಬಗ್ಗೆ ನಾನೀಗ ವಾದ ಮಾಡುತ್ತಿಲ್ಲ.

ನೀವು ಹಾಕತಕ್ಕ ವಾಟರ್ ರೇಟು ಅಮೆಂಡುಮೆಂಟು ಮಾಡಿ ಹನ್ನೆರಡೂವರೆಯಿಂದ 25 ಪರ್ಸೆಂಟು ಎಂದು ಹಾಕುವುದಾದರೆ ಅದರಿಂದ ರೈತರಿಗೆ ಬಹಳ ನೋವುಂಟಾಗುತ್ತದೆ. ಇದರ ಬಗ್ಗೆ ಸರಕಾರ ಪರ್ಯಾಲೋಚನೆ ಮಾಡಬೇಕು ಮತ್ತು ಇದರ ಬಗ್ಗೆ ತಾವೇ ಸೂಕ್ತವಾದ ಒಂದು ತಿದ್ದುಪಡಿ ತರಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

5-30 P. M.

† ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ಮೇಲೆ ಕೆಲವು ಮಾನ್ಯ ಸದಸ್ಯರು ತಮ್ಮ ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಆದರೆ ಕೆಲವರು ಮಸೂದೆಯನ್ನು ಸ್ವಾಗತಿಸಿದ್ದಾರೆ ಮತ್ತೆ ಕೆಲವರು ಬಹಳ ಕಟುವಾದ ಟೀಕೆಗಳನ್ನೂ ಮಾಡಿ ಟೀಕಿಸಿದ್ದಾರೆ. ಶ್ರೀಮಾನ್ ಮುಕ್ಕಣ್ಣಪ್ಪನವರು ಆವೇಶಪೂರಿತವಾದ ಭಾಷಣವನ್ನು ಮಾಡಿದ್ದಾರೆ. ಅವರು ಬೆಟರುಮೆಂಟು

(ಶ್ರೀ ವೀರೇಂದ್ರ ಪಾಟೀಲ್)

ಲೆವಿ ಹಳೆಯ ಮೈಸೂರಿನಲ್ಲಿರಲಿಲ್ಲ ಒಂದು ಪಕ್ಷ ಹಾಕುವದಾದರೆ ಹೊಸ ಮೈಸೂರಿನ ಭಾಗಗಳಲ್ಲಿ ಆಗುತ್ತಿರುವ ಅಪ್ಪರ್ ಕೃಷ್ಣ ಯೋಜನೆ, ಮಲಪ್ರಭಾ, ಘಟಪ್ರಭಾ ಈ ಯೋಜನೆಗಳನ್ನು ಮಾಡುವ ಭಾಗಗಳಲ್ಲಿ ಇಂತಹ ಹೊರೆಯನ್ನು ಹಾಕಲು ಈ ಮಸೂದೆಯನ್ನು ತರುತ್ತಿದ್ದಾರೆ ಎನ್ನುವ ಮಾತನ್ನು ಇಲ್ಲಿ ಹೇಳಿದರು. ಅದೇ ರೀತಿ ಶ್ರೀಮಾನ್ ಮಾದಪ್ಪ ಗೌಡರು ಕೂಡ ಅದೇ ಅರ್ಥ ಬರುವಂತೆ ಇಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಇದನ್ನು ಕೇಳಿ ನನಗೆ ಬಹಳ ದುಃಖವಾಯಿತು. ಅವರೆಲ್ಲಾ ಸಂಪೂರ್ಣವಾಗಿ ಈ ಬಿಲ್ಲಿನಲ್ಲಿರುವ ವಿಷಯಗಳನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿದ್ದರೆ ಬಹುಶಃ ಆಗ ಇಂತಹ ಮಾತುಗಳನ್ನು ಹೇಳುತ್ತಿರಲಿಲ್ಲವೇನೋ ಎಂದು ನನಗನ್ನಿಸುತ್ತದೆ. ಈ ಒಂದು ಅಮೆಂಡುಮೆಂಟನ್ನು ತರುವ ಉದ್ದೇಶವೇನು ಎಂದರೆ 1957ರಲ್ಲಿ ಇದೇ ತರಹದ ಒಂದು ಆಕ್ಟು ಪಾಸಾಗಿತ್ತು. 1961ರಲ್ಲಿ ಇದಕ್ಕಾಗಿ ಒಂದು ಅಮೆಂಡಿಂಗು ಬಿಲ್ಲು ಬಂತು. ಅದರಂತೆ ಇದರ ರೂಲ್ಸುಗಳನ್ನು ಮಾಡಿ ಅದನ್ನು ಕಾರ್ಯಗತ ಮಾಡುವುದಕ್ಕೆ ಬೆಟರುಮೆಂಟು ಲೆವಿ ಹಾಕುವಾಗ ಇಲ್ಲಿನ ಅಧಿಕಾರಿಗಳಿಗಿದ್ದ ಕುಂದುಕೊರತೆಗಳೇನು ಇತ್ತು ಎನ್ನುವುದನ್ನೆಲ್ಲಾ ಇಲ್ಲಿ ನಾನು ಮೊದಲೆ ಸುಸ್ಪಷ್ಟವಾಗಿ ಹೇಳಿದಮೇಲೂ ಕೂಡ ಇಲ್ಲಿ ಈ ರೀತಿ ಹೇಳುತ್ತಿರುವುದನ್ನು ನೋಡಿದರೆ ನಿಜವಾಗಿಯೂ ಕೂಡ ನನಗೆ ದುಃಖವಾಗುತ್ತದೆ. ಯಾವುದೋ ಒಂದು ಭಾಗಕ್ಕೆ ಟ್ಯಾಕ್ಸನ್ನು ಹಾಕಬೇಕು. ಇನ್ನೊಂದು ಭಾಗಕ್ಕೆ ಹಾಕಕೂಡದು ಎನ್ನುವುದಲ್ಲ. ತಮಗೆಲ್ಲಾ ಗೊತ್ತಿರುವ ಹಾಗೆ ಬೆಟರುಮೆಂಟು ಲೆವಿಯನ್ನು ಹೊಸದಾಗಿ ಪ್ರಾಜೆಕ್ಟುಗಳಾದ ಕಡೆಗಳಲ್ಲಿ ಕೊಡುತ್ತಾರೆ. ಪ್ರಾಜೆಕ್ಟು ಏರಿಯಾದಲ್ಲಿ ನೀರು ಬಂದಮೇಲೆ ಅವರ ಮಾರ್ಕೆಟ್ಟು ರೇಟಿನ ಮೇಲೆ ಅದರಲ್ಲಿನ ಅನ್ ಅರ್ನ್ಡ್ ಇನ್‌ಕಂ ಏನಿದೆ ಅದರಲ್ಲಿ ಒಂದು ಭಾಗದಷ್ಟು ಬೆಟರುಮೆಂಟು ಲೆವಿಯನ್ನು ಹಾಕಬೇಕೆಂದು ಇರುವುದು ಸಮಂಜಸವಾದುದು, ಈ ತತ್ವವನ್ನು ಯಾರು ವಿರೋಧ ಮಾಡುತ್ತಾರೆಂದು ನನಗನಿಸುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದಂತೆ ಇದು ಹಳೆಯ ಮೈಸೂರಿನಲ್ಲಿರುವ ಕೆ. ಆರ್. ಎಸ್. ಡ್ಯಾಂಗೆ ಅನ್ವಯವಾಗುವುದಿಲ್ಲ. ಅಲ್ಲದೆ ಹೊಸ ಮೈಸೂರಿನ ಭಾಗಗಳಲ್ಲಿ ಹಾಕುತ್ತಿರುವಂತೆ ಈಗ ದೇಶದ ಇತರ ಎಲ್ಲಾ ಭಾಗಗಳಲ್ಲಿಯೂ ಇಂತಹ ಲೆವಿಯನ್ನು ಹಾಕಬೇಕೆಂದು ತರುವಂತೆ ಇಲ್ಲಿ ಮಾಡುವುದು ಸಾಧ್ಯವಿಲ್ಲ. ನಾನು ಮೊದಲೇ ಈ ಬೆಟರುಮೆಂಟು ಲೆವಿ ಆಕ್ಟು ಯಾವ ಇರಿಗೇಷನ್ನು ವಿಭಾಗಕ್ಕೆ ಅನ್ವಯವಾಗುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿದ್ದೆ. ಹಳೆಯ ಮೈಸೂರಿನ ಭಾಗಗಳಲ್ಲಿ 1944ನೇ ಇಸವಿಯಿಂದ ಆಚೆಗೆ ಆಗಿರುವ ಯೋಜನೆಗೆ ಇದು ಅನ್ವಯವಾಗುವುದಿಲ್ಲ. 1944ರಿಂದ ಈಚೆಗೆ ಆಗಿರುವ ಭೂಮಿಗಳಿಗೆ ನೀರನ್ನು ಕೊಡುವಾಗ ಇಂತಹ ಲೆವಿಯನ್ನು ಹಾಕಲಾಗುತ್ತೆ. ಆದುದರಿಂದ ಕೆ. ಆರ್. ಎಸ್. ಡ್ಯಾಂ ಯೋಜನೆ ಇದಕ್ಕೆ ಅನ್ವಯವಾಗುವುದಿಲ್ಲ ಎನ್ನುವುದನ್ನು ಇನ್ನೊಮ್ಮೆ ಇಲ್ಲಿ ತಿಳಿಸಲು ಇಷ್ಟಪಡುತ್ತೇನೆ. ಈ ಆಕ್ಟು 1944ರಿಂದೀಚೆಗೆ ಯಾವ ಯಾವ ಪ್ರಾಜೆಕ್ಟುಗಳು ಆಗಿವೆ ಅಂತಹ ಕಡೆಗಳಲ್ಲಿ ಮಾತ್ರ ಇದು ಅನ್ವಯುವಾಗುತ್ತದೆ. 1944 ರಿಂದ ಹಿಂದಕ್ಕೆ ಯಾವ ದೊಡ್ಡ ಪ್ರಾಜೆಕ್ಟುಗಳೂ ಬಂದಿಲ್ಲ ಮತ್ತು ಈ ಆಕ್ಟಿನಿಂದೇನೂ ಅನುಕೂಲವಾಗಿಲ್ಲ ಎಂದು ಇಲ್ಲಿ ಹೇಳಲೂ ಬೇಕಾಗಿಲ್ಲ. ಇಂತಹ ಬೆಟರುಮೆಂಟು ಲೆವಿ ಎಂದು ಹಾಕಬೇಕಾಗುವುದು ದೊಡ್ಡ ದೊಡ್ಡ ಪ್ರಾಜೆಕ್ಟುಗಳಾದ ಅಪ್ಪರು ಕೃಷ್ಣಾ ಮತ್ತು ಮಲಪ್ರಭಾ, ಘಟಪ್ರಭಾ, ತುಂಗಭದ್ರ, ಹೇಮಾವತಿ, ಹಾರಂಗಿ ಮತ್ತು ಕಂಬದಕಡ ಯೋಜನೆಗಳನ್ನು ಮಾಡುವಾಗ, ಆದರೆ ಕೆ. ಆರ್. ಎಸ್. ನಬಗ್ಗೆ ಮಾನ್ಯ ಸದಸ್ಯರು ಹೇಳಿದಂತೆ ಅದಕ್ಕೆ ಇದು ಅನ್ವಯವಾಗುವುದಿಲ್ಲ. ಆದರೆ ಮಾನ್ಯ ಸದಸ್ಯರು ಮಾತಾನಾಡುವಾಗ ಭಾವೈಕ್ಯತೆಗೆ ಬಹಳ ದೂರ ಹೋಗಬೇಕಾಗುತ್ತದೆ ಎನ್ನುವ ಧಾಟಿಯಲ್ಲಿ ಇಲ್ಲಿ ಮಾತಾನಾಡಿದರು. ಹೊಸ ಮೈಸೂರು ಭಾಗದಲ್ಲಿ ಹೊಸದಾಗಿ ಪ್ರಾಜೆಕ್ಟುಗಳಾದವು ಆದ್ದರಿಂದ ಅವರು ಹೆಚ್ಚು ಕೊಡಬೇಕಾಗುತ್ತದೆ ಎಂದು ಹೇಳಿದರೆ ದೇಶದಲ್ಲೆಲ್ಲಾ ಇರುವ ಕೆರೆ ಕಟ್ಟೆಗಳನ್ನು ಪೂರ್ತಿಯಾಗಿ ಕಟ್ಟಿಸಬೇಕೆಂದರೆ ಅದಕ್ಕೆ ದುಡ್ಡನ್ನು ಎಲ್ಲಿಂದ ತಂದು ಒದಗಿಸಲು ಸಾಧ್ಯ ಮತ್ತು ಅಷ್ಟನ್ನೂ ಸರಕಾರ ಕೊಡುವುದಕ್ಕೆ ಹೇಗೆ ಸಾಧ್ಯವಾದೀತು? ಇನ್ನೊಂದು ರಿಲೀಫ್ ಇದರಲ್ಲಿ ಕೊಡಬೇಕೆಂದಿರುವುದು ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಖರ್ಚಿನಲ್ಲಿ ಮಾಡಿರುವ ಕೆರೆಗಳ ರೆಸ್ಟೊರೇಷನ್ನು ಅಥವಾ ಕನ್‌ಸ್ಟ್ರಕ್ಷನ್ನು ಅಥವಾ ಆಲ್ಟರೇಷನ್ನು ಮಾಡುವಾಗ ಇದರ ಸಾಗುವಳಿ ಪ್ರಮಾಣ ಒಂದು ಸಾವಿರ ಎಕರೆಗಳಿಗಿಂತ ಕಡಮೆ ಇದ್ದರೆ ಇದಕ್ಕೆ ತೆರಿಗೆಯನ್ನು ಹಾಕಬಾರದು ಎಂದು ಅದಕ್ಕಾಗಿ ಇದರಲ್ಲಿ ವಿನಾಯಿತಿಗಳನ್ನು ಕಲ್ಪಿಸಿಕೊಡಬೇಕೆಂದು ತಿದ್ದುಪಡಿ ಮಾಡಲಾಗಿದೆ. ಇದರ ಬಗ್ಗೆ ಸರಕಾರದ ಕಡೆಯಿಂದ ತಂದಿರುವ ತಿದ್ದುಪಡಿಯಲ್ಲಿ ಸ್ಪಷ್ಟಪಡಿಸಿ ಹೇಳಲಾಗಿದೆ. ಇದರಲ್ಲಿ ಪ್ರಶ್ನೆ ಇರುವುದು ಎಲ್ಲೆಲ್ಲಿ ಬೆಟರುಮೆಂಟು ಲೆವಿಯನ್ನು ಹಾಕಬೇಕೆಂದಿರುವುದು. ಹಿಂದೆ ಮಾನ್ಯ ಸಭೆಯಲ್ಲಿ ಪಾಸಾದ 1957ನೇ ಇಸವಿಯ ಆಕ್ಟಿನಂತೆ ಬೆಟರುಮೆಂಟು ಲೆವಿಯನ್ನು ಹಾಕಬೇಕೆಂದು ಇದ್ದರೂ, ಅದನ್ನು ಯಾವ ರೀತಿಯಲ್ಲಿ ಹಾಕಬೇಕು, ಯಾವ ರೀತಿಯಲ್ಲಿ ವಸೂಲು ಮಾಡಬೇಕು

ಮತ್ತು ಯಾವ ಆಧಾರದ ಮೇಲೆ ಹಾಕಬೇಕು ಮತ್ತು ಯಾವ ದಾಮಾಷಾದ ಮೇಲೆ ಹಾಕಬೇಕು ಎನ್ನುವುದರ ಪರಿಶೀಲನೆಯಿಂದಾಗಿ ಇದು ಕಾರ್ಯರೂಪಕ್ಕೆ ಬರಲಿಲ್ಲ. ಇದನ್ನು ಕಾರ್ಯರೂಪಕ್ಕೆ ತರಲು ಕೆಲವು ಕಷ್ಟಗಳು, ಕುಂದು ಕೊರತೆಗಳು ಮತ್ತು ಆತಂಕಗಳು ಬಂದವು. ಆ ನಂತರದಲ್ಲಿ ಏನಾದರೂ ಮಾಡಿ ಒಂದು ರೀತಿಯ ಫ್ಲಾಟುರೇಟನ್ನು ನಿಗದಿ ಮಾಡೋಣ ಎನ್ನುವ ಸಲಹೆ ಹೋದ ಸಲ ಇಂತಹ ಬಿಲ್ಲು ಬಂದಾಗ ಈ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು. ಅಲ್ಲದೆ ಒಂದು ಯೋಜನೆಗಾಗಿ ಸುಮಾರು ನಾಲ್ಕು ಕೋಟಿ ಎಂದು ಮೊದಲು ಅಂದಾಜಾಗಿದ್ದರೆ ಅದರ ಕೆಲಸಗಳು ಮುಗಿಯುವ ವೇಳೆಗೆ ಅದರ ನಾಲ್ಕರಷ್ಟು, ಐದರಷ್ಟು ಹೆಚ್ಚು ಖರ್ಚಾಗುತ್ತದೆ. ಅಲ್ಲದೆ ನಮ್ಮಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಖರ್ಚು ಮಾಡಿರುವ ಯೋಜನೆಗಳಲ್ಲಿ ನಮ್ಮ ದೇಶದಲ್ಲಿ ವಾಟರು ರೇಟು ಎಂದು ರೈತರು ಏನು ಕೊಡುತ್ತಾರೆ ಅವರು ಕೊಡುತ್ತಿರುವ ಹಣ ಸಾಲ ಕೊಟ್ಟಿರುವ ಹಣದ ಬಡ್ಡಿಗೂ ಕೂಡ ಸಾಲುವುದಿಲ್ಲ. ಅಲ್ಲದೆ ಈ ಬೆಟರುಮೆಂಟು ಲೆವಿಯಿಂದ ಏನು ಹೆಚ್ಚು ಬರುತ್ತದೆ ಎನ್ನುವುದನ್ನು ಲೆಕ್ಕ ಹಾಕಿದರೆ ಆ ಯೋಜನೆಗಾಗಿ ಏನು ಖರ್ಚಾಗಿದೆ ಅದರಲ್ಲಿ 20 ಪರ್ಸೆಂಟಿನಷ್ಟು ಕೂಡ ಬರುವುದಿಲ್ಲ. ಮತ್ತು ಈ ಒಂದು ಬೆಟರುಮೆಂಟು ಲೆವಿ ಎಂದು ನಮ್ಮ ಸ್ಟೇಟಿನಲ್ಲಿ ಹಾಕಿದ ಮೇಲೆ ಹಿಂದೆ ಬೆಳೆಯಾಗುತ್ತಿದ್ದುದಕ್ಕಿಂತ ಶೇಕಡಾ ಎಂಟರಷ್ಟು ಹೆಚ್ಚಿನ ಬೆಳೆ ಬರಬಹುದು ಎಂದು ಯೋಜನೆ ಮಾಡುತ್ತಿದ್ದರು. ಮೂರನೇ ಯೋಜನೆಯಲ್ಲಿ ತಮಗೆಲ್ಲಾ ಗೊತ್ತಿರುವ ಹಾಗೆ ಸಾವಿರಾರು ಎಕರೆಗಳಷ್ಟು ಭೂಮಿಯನ್ನು ಅಭಿವೃದ್ಧಿಗೆ ತಂದು ಖರ್ಚುಮಾಡಬೇಕೆಂದು ಅಂದಾಜು ಮಾಡಿದುದರಲ್ಲಿ ಶೇಕಡಾ 60ರಿಂದ 70ರವರೆಗೆ ಸಣ್ಣ ಕೆರೆಗಳಿಗೆ ಖರ್ಚಾಗಬೇಕಾಗಿ ಬಂತು. ಅಲ್ಲದೆ 1944 ರಿಂದೀಚೆಗೆ ಏನು ಕೆರೆ ಕಟ್ಟೆಗಳನ್ನು ಕಟ್ಟಿದ್ದಾರೆ ಅಂತಹ ಕಡೆಗಳಲ್ಲಿ ನೀರು ಉಪಯೋಗಿಸುವವರು ಟ್ಯಾಕ್ಸನ್ನೇ ಕೊಡುತ್ತಿಲ್ಲ. ಕೇವಲ ಒಂದು ಅಥವಾ ಒಂದೂವರೆ ಪರ್ಸೆಂಟಿನಷ್ಟು ಬೆಟರುಮೆಂಟು ಲೆವಿ ಎಂದು ಎಲ್ಲಿ ಹಾಕಬೇಕಾಗುತ್ತದೆ ಎಂದರೆ ಯಾರು ಬರಗಾಲಕ್ಕೆ ಮಳೆಗಾಗಿ ಮುಗಿಲನ್ನೇ ನೋಡಿಕೊಂಡು ಕಾಯುತ್ತಿರುತ್ತಾರೋ ಅಂತಹವರುಗಳು ಇರುವ ಕಡೆಗಳಲ್ಲಿ ಯೋಜನೆಗಳನ್ನು ಮಾಡಿ ನೀರನ್ನು ಅವರಿಗಾಗಿ ಕೊಡುವಾಗ ಅಲ್ಲಿ ಖರ್ಚುಮಾಡಿದ ಹಣಕ್ಕೆ ಶೇಕಡ ಒಂದರಷ್ಟು ಬಡ್ಡಿ ಕೂಡ ಬಾರದೇ ಹೋದರೆ ಹೊಸದಾಗಿ ಪ್ರಾಜೆಕ್ಟುಗಳನ್ನು ಮಾಡುವುದಾದರೂ ಹೇಗೆ ಅದಕ್ಕೆಲ್ಲಾ ಜನರಲ್ ರೆವೆನ್ಯೂನಲ್ಲಿ ಹಣ ಇದೆ ಎಂದು ಇದಕ್ಕೆಲ್ಲಾ ದುಡ್ಡು ಸುರಿಯುವುದಕ್ಕೆ ಹೇಗೆ ಸಾಧ್ಯ ಇದರ ಸಲುವಾಗಿ ಯಾರು ತಮ್ಮ ಭೂಮಿಗೆ ನೀರು ಬರುತ್ತದೆ ಎಂದು ಮತ್ತು ಆ ಭೂಮಿಗೆ ಶೇಕಡ 20 ರಷ್ಟು ಕಂದಾಯ ಎಂದು ಏನು ಕೊಡುತ್ತಾರೋ ಅಂತಹವರು ನೀರನ್ನುಪಯೋಗ ಮಾಡಿಕೊಂಡುದಕ್ಕೆ ಇಂತಿಷ್ಟು ಭಾಗ ಎಂದು ಸರಕಾರಕ್ಕೆ ಕೊಡುವುದು ನ್ಯಾಯವಾಗಿಯೂ ಇರುತ್ತದೆ ಮತ್ತು ಇದರಿಂದ ಜನರಿಗೂ ಅನುಕೂಲವಾಗುತ್ತದೆ. ಹೀಗೆ ಸತತವಾಗಿ ಪ್ರಯತ್ನ ಮಾಡಿ ದೇಶಕ್ಕೆ ಅನುಕೂಲಗಳನ್ನು ಒದಗಿಸಬೇಕೆಂದಿರುವಾಗ ಜನರೂ ಕೂಡ ಸ್ವಲ್ಪ ತ್ಯಾಗ ಮಾಡಿ ಮುಂದೆ ಬರಬೇಕು ಮತ್ತು ತಾವೆಲ್ಲರೂ ಕೂಡ ಇದಕ್ಕೆ ಸಹಕಾರ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇನ್ನು ಹಳೆ ಮೈಸೂರು ಬಗ್ಗೆ ನಾನು ಮಾತನಾಡಬೇಕಾದರೆ, ಈ ಬೆಟರ್‌ಮೆಂಟ್ ಲೆವಿ ಹೊಸದೇನೂ ಅಲ್ಲ. ಇದನ್ನು ಹಾಕುವ ಬಗ್ಗೆ 1957 ರಿಂದಲೂ ಕಾನೂನು ಇದೆ. ಇವತ್ತಿನ ದಿವಸ ಕೂಡ ನಮ್ಮ ಸಹಪಾಠಿಗಳು ಹಳ್ಳಿಗಳಿಗೆ ಹೋದರೆ, ಜನಗಳು ಕೆರೆ, ಕಟ್ಟೆಗಳನ್ನು ಮಾಡಿಕೊಡಿ, ಅಡ್ವಾನ್ಸ್ ಕಂಟ್ರಿಬ್ಯೂಷನ್ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಒಂದೆರಡು ಕಡೆ ರೈಟಿಂಗಿನಲ್ಲಿಯೂ ಹೇಳಿದ್ದಾರೆ. ಕಂಟ್ರಿ ಬ್ಯೂಷನ್ ಪರ್ ಎಕರ್ ಎಷ್ಟು ಎಂದು ಹೇಳಿದರೆ ಅಡ್‌ವಾನ್ಸಾಗಿ ಕೊಡುವುದಕ್ಕೆ ಸಿದ್ಧ ಎಂದು ಹೇಳಿರುವುದಲ್ಲದೆ ಬಹುಶಃ ಕಾಸ್ಟ್ ಆಫ್ ದಿ ಪ್ರಾಜೆಕ್ಟ್ ವಹಿಸಲು ತಯಾರಾಗಿದ್ದೇವೆ ಎಂದು ಹೇಳಿರುವ ನಿದರ್ಶನಗಳೂ ಇವೆ. ದೊಡ್ಡ ಕೆರೆಯೇ ಆಗಲಿ ಸಣ್ಣ ಕೆರೆಯೇ ಆಗಲಿ ಯವುದಾದರೂ ಕೂಡ, ನೀರಾವರಿ ಕಾಂಗಾರಿಗಳಿಂದ ಅನುಕೂಲ ಹೊಂದುವ ರೈತರು ಆಕಾಂಗಾರಿಗಳ ಖರ್ಚಿನ ಬಗ್ಗೆ ಸ್ವಲ್ಪ ಕಂಟ್ರಿಬ್ಯೂಷನ್ ಕೊಡುತ್ತೇವೆಂದು ಮುಚ್ಚಳಿಕೆ ಬರೆದುಕೊಡುತ್ತಿದ್ದರು. ಈಗ ಇಷ್ಟು ಬೆಟರ್ ಮೆಂಟ್ ಲೆವಿ ಕೊಡಬೇಕೆಂದು ಕಾನೂನಿನಲ್ಲಿ ನಿಗದಿಮಾಡುವುದರಿಂದ, ಅವರು ಮುಚ್ಚಳಿಕೆ ಬರೆದು ಕೊಡಬೇಕಾದ ಅವಶ್ಯಕತೆ ಇಲ್ಲ. ನಾವು ಈ ಬೆಟರ್‌ಮೆಂಟ್ ಲೆವಿ ಹೊಸದಾಗಿ ಹಾಕಿ, ರೈತರಮೇಲೆ ತೆರಿಗೆ ಭಾರ ಹೊರಿಸುವ ಪ್ರಯತ್ನ ಸರಕಾರ ಮಾಡುತ್ತಾ ಇದೆ. ಇಷ್ಟು ಟ್ಯಾಕ್ಸು ಹಾಕಿದರೆ ರೈತನ ಬೆನ್ನು ಮೂಳೆ ಮುರಿದು ಹೋಗುತ್ತದೆ, ರೈತರ ಏಳಿಗೆಗೆ ಈ ಕಂದಾಯ ವಿಧಿಸುವುದರಿಂದ ಆತಂಕ ಬರುತ್ತದೆ ಎಂದು ಹೇಳುವುದು ಸರಿಯಲ್ಲ. ಹೊಸ ನೀರಾವರಿ ಯೋಜನೆಗಳಿಗಾಗಿ ಖರ್ಚಾಗುತ್ತಿರುವ ಕೋಟ್ಯಾಂತರ ರೂಪಾಯಿನಲ್ಲಿ ಅಲ್ಪ ಸ್ವಲ್ಪವನ್ನಾದರೂ ಪಡೆಯುವುದು ಈ ಮಸೂದೆಯ ಉದ್ದೇಶ. ಈ ಸಂದರ್ಭದಲ್ಲ ಒಂದು ಮಾತನ್ನು ಸ್ಪಷ್ಟಪಡಿಸಬೇಕಾಗಿದೆ. ಭೂಮಿ ಒಡೆಯ ಒಮ್ಮೆ ಬೆಟರ್‌ಮೆಂಟ್ ಲೆವಿ ಕೊಟ್ಟಮೇಲೆ, ಮತ್ತೆ ಮತ್ತೆ ಅದನ್ನು ಕೊಡುವಹಾಗಿಲ್ಲ. ಏಕೆಂದರೆ ಬೆಟರ್‌ಮೆಂಟ್ ಲೆವಿ ಕೊಡುವುದು ಒಂದೇ ಸರಿ. ಅದನ್ನು ಕ್ಯಾಷ್ ಡೌನ್ ಮಾಡಿದರೆ, 10 ಪರ್ಸೆಂಟ್ ರಿಬೇಟ್ ಕೊಡಬೇಕೆಂದು ಒರಿಜನಲ್

(ಶ್ರೀ ವೀರೇಂದ್ರ ಪಾಟೀಲ್)

ಆಕ್ಟಿನಲ್ಲಿ ಪ್ರಾವಿಷನ್ ಮಾಡಿದ್ದೇವೆ. ಅವನಿಗೆ ಹಾಗೆ ಒಟ್ಟಿಗೆ ಕೊಡುವುದಕ್ಕೆ ಅನಾನುಕೂಲವಾದರೆ 20 ವಾರ್ಷಿಕ ಕಂತುಗಳಲ್ಲಿ ಕೊಡಲು ಅವಕಾಶವಿದೆ ; ಈ ತೆರಿಗೆಗೆ ಇಂಟರೆಸ್ಟ್ ಇಲ್ಲ. ಈ ಅಭಿವೃದ್ಧಿ ತೆರಿಗೆ ಹಾಕುವುದು ಒಂದೇ ಸಲ ; ವಾಟರ್ ರೇಟ್ ಮೆಂಟಿನೆನ್ಸ್ ಸೆಸ್‌ನಂತೆ ಅಲ್ಲ, ಇವು ಪ್ರತಿವರ್ಷವೂ ಬರುತ್ತವೆ. ಕಾಂಟ್ರಿಬ್ಯೂಷನಿನಲ್ಲಿ 2 ವರ್ಷದಲ್ಲಿಯಾದರೂ ಕೊಡಬಹುದು, 10 ವರ್ಷದಲ್ಲಿಯಾದರೂ ಕೊಡಬಹುದು, ಅಥವಾ ಒಂದೇ ವರ್ಷದಲ್ಲಿ ಕೊಟ್ಟು ಮುಗಿಸಿಬಿಟ್ಟು, ರಿಬೇಟ್ ತೆಗೆದುಕೊಳ್ಳಬಹುದು ಆದ್ದರಿಂದ ಮತ್ತೆ ಬೆಟರ್‌ಮೆಂಟ್ ಲೆವಿ ಬರುವ ಹಾಗೇ ಇಲ್ಲ, ಅದನ್ನು ಒಂದೇ ಸಲ ಹಾಕುವುದು ಎಂದು ಸ್ವಚ್ಛವಾಡಿ ಒತ್ತಿ ತಿಳಿಸುತ್ತಿದ್ದೇನೆ. ಆದ್ದರಿಂದ ರೈತರಿಗೆ ಇದರಿಂದ ಹೆಚ್ಚಿಗೆ ಹೊರೆಯಾಗುವುದೆಂದು ಟೀಕಿಸುವುದು ಸರಿಯಲ್ಲ ಇದರಿಂದ ಯಾವ ರೀತಿಯ ತೊಂದರೆಯೂ ಆಗುವುದಿಲ್ಲ.

ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮಂಡ್ಯದಲ್ಲಿ ಕೆ. ಆರ್. ಎಸ್. ಕೆಳಗೆ ಕಮ್ಯಾಂಡ್ ಏರಿಯದಲ್ಲಿ ಯಾವುದಾದರೂ ಪಿಕ್‌ಅಪ್ ಮಾಡಿದರೆ, ಹೊಸದಾಗಿ ಬೆಟರ್‌ಮೆಂಟ್ ಲೆವಿ ಹಾಕುತ್ತೀರಾ ಎಂದು ಕೇಳಿದರು. ಒಂದು ಲಕ್ಷ ರೂಪಾಯಿಗೂ ಹೆಚ್ಚಿಗೆ ವೆಚ್ಚದಲ್ಲಿ ನೀರಾವರಿ ಕಾಂಗಾರಿ ನಿರ್ಮಾಣವಾಗಿದ್ದು, ಅದರ ಪ್ರಯೋಜನ ಪಡೆಯುತ್ತಿದ್ದರೆ ಈ ತೆರಿಗೆ ಕೊಡಬೇಕು. ಆ ಲೆವಿ ಇನ್ನು ಅರಿಯರ್ಸ್‌ನಲ್ಲಿದ್ದರೆ, ಅವರು ಅದನ್ನು ಕೊಡಬೇಕಾಗುತ್ತದೆ. ಅದು ಎಲ್ಲಾ ಕಲೆಕ್ಟ್ ಆದಮೇಲೆ, ಇನ್ನೊಂದು ಸಲ ಬೆಟರ್‌ಮೆಂಟ್ ಲೆವಿ ಹಾಕುವುದಕ್ಕೆ ಸಾಧ್ಯವಿಲ್ಲ ಅಂತ ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ಒಂದು ವೇಳೆ ಆ ಕಮ್ಯಾಂಡ್ ಏರಿಯ ಹೊರಗಿರುವ ಜನರು ಒಂದು ಲಕ್ಷಕ್ಕಿಂತ ಹೆಚ್ಚಿನ ಖರ್ಚಿನಲ್ಲಿ ಪಿಕ್‌ಅಪ್ ಮಾಡಿಸಿಕೊಂಡು ಹೊಸದಾಗಿ ಅಚ್ಚುಕಟ್ಟನ್ನು ಮಾಡಿದಾಗ, ಬೆಟರ್‌ಮೆಂಟ್ ಲೆವಿ ಕೊಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಆದರೂ ಕೂಡ ಸಣ್ಣಪುಟ್ಟ ಕೆರೆಗಳ ಕೆಳಗೆ ಸ್ಪೆಷಲ್ ಬೆನಿಫಿಟ್ ಕಾಂಟ್ರಿಬ್ಯೂಷನ್ ಹಾಕುತ್ತೀರಾ.

ಶ್ರೀ ವೀರೇಂದ್ರಪಾಟೀಲ್.—ಈ ಸಣ್ಣಪುಟ್ಟ ಕೆರೆಗಳಿಗೆ ಟೋಟಲ್ ಎಕ್ಸೆಂಪ್ಷನ್ ಕೊಡುವ ಉದ್ದೇಶದಿಂದಲೇ ರೆಸ್ಟೋರೇಷನ್‌ಗೆ ಒಂದು ಲಕ್ಷ ರೂಪಾಯಿವರೆಗೆ ಖರ್ಚು ಮಾಡಿದ್ದರೆ, ಈ ನೀರಾವರಿ ಕೆಳಗೆ ಇರುವ ಜಮೀನಿಗೆ ಬೆಟರ್‌ಮೆಂಟ್ ಲೆವಿ ಹಾಕುವುದಕ್ಕೆ ಹೋಗುವುದಿಲ್ಲ. ನಾನು ಈ ಸಂದರ್ಭದಲ್ಲಿ ಒಂದು ಅಮೆಂಡ್‌ಮೆಂಟ್ ತಂದಿದ್ದೇನೆ, ಅದನ್ನು ಕಲಮುವಾರ್ ಚರ್ಚೆಯಾಗುವಾಗ ಮಂಡಿಸುತ್ತೇನೆ. ಈ ತಿದ್ದುಪಡಿ ಪ್ರಕಾರ ಹೊಸ ಕೆರೆಯೇ ಆಗಲಿ, ಅಥವಾ ಡಿಫಂಗ್ಟ್ ಆಗಿರುವ ಕೆರೆಯ ರೆಸ್ಟೋರೇಷನ್ನಿಗಾಗಲಿ, ಅಥವಾ ಸಣ್ಣಪುಟ್ಟ ಕೆರೆಗಳ ನಿರ್ಮಾಣಕ್ಕೇ ಆಗಲಿ 1 ಲಕ್ಷ ರೂಪಾಯಿಗಿಂತ ಕಡಿಮೆ ವೆಚ್ಚ ಮಾಡಿದ್ದರೆ, ಈ ತರಹ ಬೇಸಿಕ್ ಕಂಟ್ರಿಬ್ಯೂಷನ್ ಮತ್ತು ಸ್ಪೆಷಲ್ ಬೆನಿಫಿಟ್ ಕಂಟ್ರಿಬ್ಯೂಷನ್, ಆ ಯೋಜನೆಗಳಿಂದ ಲಾಭ ಹೊಂದುವ ಜಮೀನಿನವರಿಗೆ ಅಪ್ಲೈ ಆಗುವ ಹಾಗಿಲ್ಲ; ಈ ರೈತರು ಟ್ಯಾಕ್ಸ್ ಕೊಡುವ ಅವಶ್ಯಕತೆ ಇಲ್ಲ.

ಇದಕ್ಕೆ ಹೆಚ್ಚಿಗೆ ಏನೂ ಹೇಳಬೇಕಾಗಿಲ್ಲ ರೈತರ ಮೇಲೆ ಯಾವ ತರಹದ ಅನ್ಯಾಯದ ತೆರಿಗೆಯನ್ನು ಹೊರಿಸಿಲ್ಲ ಎಂದು ಮತ್ತೊಮ್ಮೆ ಹೇಳುತ್ತೇನೆ. ಈ ಮಸೂದೆಯ ಉದ್ದೇಶವೇನೆಂದರೆ ನೀರಾವರಿ ಕಾಂಗಾರಿಗಳಿಂದ ಹೆಚ್ಚು ಅನುಕೂಲ ಹೊಂದುತ್ತಿರುವ ರೈತರು, ತಮ್ಮ ವರಮಾನದಲ್ಲಿ ಸ್ವಲ್ಪ ಭಾಗವನ್ನಾದರೂ ಕೊಟ್ಟು ಈ ಕಾಂಗಾರಿಗಳ ಕೊಂಚ ಖರ್ಚನ್ನು ವಹಿಸಲಿ ಎಂದು, ಈ ತೆರಿಗೆಯಿಂದ ಯೋಜನೆಗಳಿಗೆ ಹಾಕುವ ಹಣದಲ್ಲಿ ಶೇಕಡ 20ರಷ್ಟು ಬರಬಹುದು; ಇದು ಅಷ್ಟು ಏನೂ ಭಾರಿ ಮೊತ್ತವಲ್ಲ. ಆದ್ದರಿಂದ ಈ ತೆರಿಗೆಯನ್ನು ಹಾಕಿ, ದುಡ್ಡನ್ನು ಪಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು ಮತ್ತು ನಾನು ತಂದಿರುವ ಅಮೆಂಡ್‌ಮೆಂಟನ್ನು ಒಪ್ಪಿಕೊಳ್ಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—1944ನೇ ಇಸವಿಯಿಂದ ಈಚೆಗೆ ಕೆರೆ ಕಟ್ಟಿ ಕಂಟ್ರಿಬ್ಯೂಷನ್ ಲೆವಿ ಮಾಡಿದ್ದರೆ, ಅಂಥ ಕೆರೆಗಳ ಅಚ್ಚುಕಟ್ಟಿನ ಮೇಲೆ ಬೆಟರ್‌ಮೆಂಟ್ ಲೆವಿ ಬೀಳುತ್ತದೋ ?

ಶ್ರೀ ವೀರೇಂದ್ರಪಾಟೀಲ್.—ನಾನು ಮೊದಲೇ ಹೇಳಿದ್ದೇನೆ. ಈಗಾಗಲೇ ಲೆವಿ ಮಾಡಿದ್ದರೆ, ಇನ್ನೊಂದು ಸಲ ಮಾಡುವ ಹಾಗಿಲ್ಲ. ಹಳೆಯ ಮೈಸೂರಿನಲ್ಲಿ 1944ರ ತರುವಾಯ ಏನಾದರೂ ನೀರಾವರಿ ಕಾಂಗಾರಿಯಾಗಿ, ಬೆಟರ್‌ಮೆಂಟ್ ಲೆವಿ ಹಾಕದೆ ಬಿಟ್ಟಿದ್ದರೆ, ಅಂಥ ಏರಿಯಾಗೆ ಈ ಲೆವಿ ಅಪ್ಲೈ ಮಾಡಬೇಕಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಹೊಸ ಕಾಂಗಾರಿಗೆ 2 ಲಕ್ಷ ರೂಪಾಯಿ ಖರ್ಚು ಮಾಡಿದ್ದರೆ, ಅದರಿಂದ ವಸೂಲಾಗತಕ್ಕಂಥ ಕಂಟ್ರಿಬ್ಯೂಷನ್ 5 ಲಕ್ಷ ರೂಪಾಯಿ ಆಗತಕ್ಕ ಸಂದರ್ಭವಿಲ್ಲವೆ ?

ಶ್ರೀ ವೀರೇಂದ್ರಪಾಟೀಲ್.—ಬೆಟರ್‌ಮೆಂಟ್ ಲೆವಿಗೂ ಮತ್ತು ಪ್ರಾಜೆಕ್ಟ್ ವರ್ಕಿಗೆ ಎಷ್ಟು ಖರ್ಚಾಗಿದೆ ಅನ್ನುವುದಕ್ಕೂ ಸಂಬಂಧವಿಲ್ಲ. ಬೆಟರ್‌ಮೆಂಟ್ ಲೆವಿ ಹಾಕುವ ತತ್ವ, ಉದ್ದೇಶ, ಯಾವ ಒಂದು ಏರಿಯಾದಲ್ಲಿ ಇರ್ರಿಗೇಷನ್ ವರ್ಕ್ ಬರುತ್ತದೊ, ಅದರ ಕೆಳಗೆ ಇರುವಂಥ ಜಮೀನಿಗೆ

ಮಾರ್ಕೆಟ್ ವ್ಯಾಲ್ಯು ಹೆಚ್ಚಾಗುತ್ತದೆ, ಅದರ ವ್ಯಾಲ್ಯು ಅಪ್ರಿಶಿಯೇಟ್ ಆಗಿ ಅನ್ ಅರ್ನ್ಡ್ ಇನ್‌ಕಂ ಬರುತ್ತದೆ ಅನ್ನುವುದು, ಇಲ್ಲಿ ಕೆರೆಗೆ ಎಷ್ಟು ಖರ್ಚಾಗಿದೆ ಅನ್ನುವ ಪ್ರಶ್ನೆ ಅಲ್ಲ. ಏಕೆಂದರೆ ನಾವು ಇವತ್ತೆಲ್ಲಾ ಅದರ ಶೇಕಡ 20ರಷ್ಟು ರಿಕವರ್ ಮಾಡಬಹುದು ಈ ಲೆವಿಯಿಂದ. ಆದ್ದರಿಂದ ರಿಕವರಿ ಕ್ರೈಟೀರಿಯವಾಗಿ ಇಟ್ಟುಕೊಂಡು ಲೆವಿ ಮಾಡಲು ಹೋಗಿಲ್ಲ. ಇಂಕ್ರೀಸ್ಡ್ ವ್ಯಾಲ್ಯುನಲ್ಲಿ ಸರ್ಟನ್ ಪರ್ಸೆಂಟೇಜ್ ವಸೂಲು ಮಾಡುತ್ತೇವೆ.

Sri C. J. MUCKANNAPPA.—In section 4 (2) (*b*), it is stated as follows :—

> " (i) for not less than eight months in a year, rupees twenty-five per acre per annum ; and
>
> (ii) for not less than three months but less than eight months in a year, rupees twelve and a half per acre per annum."

You have not given water to me and supposing there is no water. The tank is there. We make the law and you are going to give it to the hands of the executive authority to implement it. I want to go in an appeal to the Deputy Commissioner. That is why I want the Hon'ble Minister to say whether it is compulsory to pay without taking water. Unless he makes it clear, I think the officers will interpret it in their own way.

Mr. SPEAKER.—Is the member willing to give it to a tenant. On account of litigation in the family, he is not prepared to take it and he will not use it. Under such circumstances how are those cases considered ?

Sri VEERENDRA PATIL.—We cannot consider such cases.

Sri KADIDAL MANJAPPA.—May I know whether he has considered the question of levy as unrelated to the capital value enhanced and unrelated to the expenditure incurred and whether it is constitutional ?

Mr. SPEAKER.—Was the point covered by the Hon'ble Member's speech ?

Sri KADIDAL MANJAPPA.—Yes, Sir. There are a few cases where Government is spending more money. In a project, they may spend Rs. 2 lakhs and they can recover.

Mr. SPEAKER.—They can recover only wherever there is enhanced value, that is what is called unearned increase. So, it is a portion that they want to levy. The basis for that is that there is an enhancement in the value, that being attributable to the scheme. If the member say that by spending Rs. 2 lakhs or earnings on account of this levy, say the basic levy, will be Rs. 5 lakhs, then that is a different point altogether.

Sri KADIDAL MANJAPPA.—There are two points. I was submitting there were a few cases where they may be collecting more than what they spend and irrespective of the enhanced capital value.

Mr. SPEAKER.—Even when there is no enhancement, they will levy.

Sri KADIDAL MANJAPPA.—It may be the question of quantum. In some cases, there may not be any improvement at all, because they were paying wet assessment already. The additional benefit they may not secure.

Sri VEERENDRA PATIL.—The basis for the betterment levy is, I have already submitted, it has nothing to do with the cost of construction of the project. The basis is the increase in the value of the land. If there is any increase, there is provision made here 3(2):

> "There shall be levied a tax called the betterment contribution at the rate specified in section 4 in accordance with provisions of this Act on the land which in the opinion of the prescribed offcer has benefited."

If that land is not benefited, no charges will be levied.

† ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಒಂದು ಲಕ್ಷ ರೂಪಾಯಿಗಳಿಗೊಳಪಟ್ಟ ಕಾಮಗಾರಿಗಳಲ್ಲಿ ಯಾವ ಬೆಟರ್‌ಮೆಂಟ್ ಲೆವಿಯನ್ನೂ ಹಾಕುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದರು. 1944ನೆ ಇಸವಿಯಿಂದೀಚೆಗೆ ಒಂದು ಲಕ್ಷ ರೂಪಾಯಿಗಳಿಗೊಳಪಟ್ಟು ಆಗಿರತಕ್ಕ ಕಾಮಗಾರಿಗಳಲ್ಲಿ ಈಗ ತೆರಿಗೆಯನ್ನು ವಸೂಲ್ಮಾಡುತ್ತಿದ್ದಾರೆ. ಅದಕ್ಕೆ ಈಗ ವಿನಾಯಿತಿ ಸಿಕ್ಕುತ್ತದೆಯೇ ಸ್ವಾಮಿ?

ಶ್ರೀ ವೀರೇಂದ್ರ ಪಾಟೀಲ್.—1944 ರಲ್ಲಾಗಲೀ ಅಲ್ಲಿಂದ ಈಚೆಗೆ ಆದಂಥ ಕೆಲಸಗಳಾಗಲಿ ಒಂದು ಲಕ್ಷಕ್ಕೆ ಒಳಗೆ ಇದ್ದಂಥ ಕೆಲಸಗಳಿಗೆ ನೀರಾವರಿ ಕೆಲಸಗಳು, ಕೆರೆಗಳು, ಇಂಥವುಗಳಿಗೆ ಬೆಟರ್‌ಮೆಂಟ್ ಲೆವಿ ಇಲ್ಲ ಎಂದು ಹೇಳಿದ್ದೇನೆ. ಆ ಪ್ರಕಾರ ಒಂದು ತಿದ್ದುಪಡಿಯನ್ನೂ ಕಳಿಸಿದ್ದೇನೆ. 1944ನೆ ಇಸವಿ ಎಂದು ಅನ್ವಯಿಸುವುದಿಲ್ಲ. ಎಲ್ಲದಕ್ಕೂ ಸಹ ಎಂದರೆ ಹಿಂದೆ ಆಗಿರುವುದು, ಇವತ್ತು ಆಗುತ್ತಿರುವುದು, ಮುಂದೆ ಆಗುವುದು, ಎಲ್ಲದಕ್ಕೂ ಬೆಟರ್‌ಮೆಂಟ್ ಲೆವಿ ಹಾಕುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಭೂಮಿಯ ಬೆಲೆ ಹೆಚ್ಚು ಆಗಲಾರದ ಪಕ್ಷದಲ್ಲಿ ಏನೂ ವಸೂಲ್ಮಾಡುವುದಿಲ್ಲ ಎಂದು ಮಂತ್ರಿಗಳು ಹೇಳಿದರು. ಸ್ಪೆಷಲ್ ಬೆಟರ್‌ಮೆಂಟ್ ಲೆವಿ ಸಹ ಅದರಲ್ಲಿ ಸೇರುತ್ತದೆಯೇ ಎನ್ನುವುದು ಅರ್ಥವಾಗಲಿಲ್ಲ. ಇದನ್ನು ಸ್ಪಷ್ಟಪಡಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ಎರಡನ್ನೂ ವಸೂಲ್ಮಾಡುವ ಹಾಗೆ ಇಲ್ಲ. ಅದು ಸ್ಪಷ್ಟವಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—1944 ರಿಂದೀಚೆಗೆ ಇಲ್ಲಿಯವರೆಗೂ ಬೆಟರ್‌ಮೆಂಟ್ ಲೆವಿಯನ್ನು ವಸೂಲ್ಮಾಡಿದ್ದಾರೆ. ಆಗ ಒಂದು ಲಕ್ಷದ ಒಳಪಟ್ಟ ಕೆಲಸಗಳಿಗೆ ರಿಯಾಯಿತಿ ಇರಲಿಲ್ಲ. ಆ ಹಣ ಅನೇಕ ಸಂದರ್ಭಗಳಲ್ಲಿ ವಸೂಲಾಗಿಲ್ಲ. ಈಗ ವಿನಾಯಿತಿಯನ್ನು ಕೊಡುತ್ತಿದ್ದೀರಿ. ಹಿಂದೆ ಲೆವಿ ಮಾಡಿರುವುದಕ್ಕೆ ಕೂಡ ರಿಯಾಯಿತಿಯನ್ನು ಕೊಡುತ್ತೀರೋ?

Mr. SPEAKER.—That is outside the scope of this Act.

Sri R. N. LAKSHMIPATHI (Gowribidnur).—Supposing a particular work is there. You are spending Rs. 90,000; you are exempting lands from betterment levy. After ten years, you spend another 50,000; then the total amounts comes to Rs. 1,40,000; then would it come under the betterment levy?

Sri VEERENDRA PATIL.—It is a hypothetical case.

Mr. SPEAKER.—I will put it to the vote of the House. Hon'ble Members will now understand the speed. The speed of thought and the speed of action are different. I have always felt it is not so easy. I will put it to the vote:

The question is:

> "That the Mysore Irrigation (Levy of Betterment Contribution and Water Rate) (Amendment) Bill, 1963, be taken into consideration."

The motion was adopted.

CLAUSE 2.

Mr. SPEAKER.—There are amendments. I would like to know from the Hon'ble Members which of them they want to move.

Sri V. S. PATIL.—In view of the amendment to be moved by the Hon'ble Minister, I do not like to move my amendment, Sir.

Mr. SPEAKER.—First amendment is not moved, the next amendment Sri H. R. Keshava Murthy.

Sri H. R. KESHAVA MURTHY.—Sir, I beg to move:

"That in clause 2 in the proposed amendment, sub-clause (f) (b) of section 2 of the Principal Act, the following words shall be added at the end:

"capable or irrigating 1,000 acres of land or more."

"That in the proposed clause (*fb*) section 2 of the Principal Act in line 3, between the words 'than' and 'ten', the words 'rupees' shall be inserted.

Mr. SPEAKER.—Amendment moved:

"That in clause 2 of proposed amendment to sub-clause (*fb*) of section 2 of the Principal Act, the following words shall be added at the end:

"capable of irrigating 1,000 acres of land or more"

"That in the proposed clause (*fb*) of section 2 of the Principal Act, in line 3, between the words 'than' and 'ten', the words 'rupees' shall be inserted."

Mr. SPEAKER.—There is an amendment by the Hon'ble Minister.

Sri VEERENDRA PATIL.—Sir, I beg to move:

"That in the proposed clause (*fc*) of section 2 of the Principal Act, for the words "a tank or other reservoir including the canals, channels, embankments, structures and installations, connected therewith or auxiliary thereto", the words and brackets "a tank or other reservoir (including the canals, channels, embankments, structures and installations connected therewith or auxiliary thereto), costing in respect of construction, restoration, expansion or alteration more than rupees one lakh" shall be substituted."

Mr. SPEAKER.—Amendment moved:

"That in the proposed clause (*fc*) of section 2 of the Principal Act, for the words "a tank or other reservoir including the canals, channels, embankments, structures and installations connected therewith or auxiliary thereto", the words and brackets "a tank or other reservoir (including the canals, channels, embankments, structures and installations connected therewith or auxiliary thereto), costing in respect of construction, restoration, expansion or alteration, more than rupees one lakh" shall be substituted.'

I think the Hon'ble Minister may accept the second amendment of Sri Keshava Murthy–it is purely verbal.

Sri VEERENDRA PATIL.—I accept it, Sir.

Sri H. R. KESHAVA MURTHY.—The first amendment is also a simple amendment, Sir. The Hon'ble Minister may be pleased to accept it.

Sri VEERENDRA PATIL.—Sir, I have sufficiently explained in my reply to the debate.

6-00 P.M.

†ಶ್ರೀ ಎಚ್. ಆರ್. ಕೇಶವಮೂರ್ತಿ.—ಸ್ವಾಮಿ, ಒಂದು ಸಾವಿರ ಎಕರೆವರೆಗೆ ನೀರಾವರಿಯಾಗುವುದು ಮೈನರ್ ಇರಿಗೇಷನ್ ಎಂದು ಪರಿಗಣಿಸಬೇಕೆಂದು ಈ ಕ್ಲಾಜಿನಲ್ಲಿ ಹೇಳಲಾಗಿದೆ. ಆದರೆ ಮೇಜರ್ ಹಾಗು ಮೀಡಿಯಂ ಇರಿಗೇಷನ್ ಬಗ್ಗೆ ವಿವರ ಹೇಳಿರುವುದನ್ನು ನೋಡಿದರೆ ಇದರಲ್ಲಿ ಸ್ವಲ್ಪ ಕನ್‌ಫ್ಯೂಷನ್ ಆದಹಾಗೆ ಕಾಣುತ್ತದೆ. ಆದುದರಿಂದ ನಾನು ಮಂಡಿಸಿದ ತಿದ್ದುಪಡಿ ಪ್ರಕಾರ ಒಂದು ಸಾವಿರ ಎಕರೆ ಮೇಲ್ಪಟ್ಟದ್ದು ಸಹ ಸೇರಿಸುವುದು ಸೂಕ್ತವಾಗಿದೆ. ಆದುದರಿಂದ ನನ್ನ ಈ ತಿದ್ದುಪಡಿ ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

†**Sri VEERENDRA PATIL.**—I am not accepting it. There is no ambiguity. This amendment is unnecessary in view of the fact that in the clause itself it has been made clear that irrigation works capable of irrigating up to one thousand acres are brought under the definition of minor irrigation. That means that over and above 1,000 acres, they come under minimum or major irrigation.

Mr. SPEAKER.—First, I will put amendment No. 6 to vote. The question is:

> "That in clause 2, in the proposed clause (*fc*) of section 2 of the Principal Act, for the words "a tank or other reservoir including the canals, channels, embankments, structures and installations connected therewith or auxiliary thereto", the words and brackets 'a tank or other reservoir (including the canals, channels, embankments, structures and installations connected therewith or auxiliary thereto), costing in respect of construction, restoration, expansion or alteration, more than rupees one lakh' shall be substituted."

The amendment was adopted.

Mr. SPEAKER.—I will put to vote first amendment of Sri Keshava Murthy.

The question is:

> "That in clause 2 in the proposed clause (*fb*) of section 2 of the Principal Act, the following words shall be added at the end :"
>
> "capable of irrigating one thousand acres of land or more".

The amendment was negatived.

Mr. SPEAKER.—I shall now put next amendment to vote.

The question is :

"That in clause 2 in the proposed clause (fb) of section 2 of the Principal Act in line 3, between the words 'than' and 'ten the word 'rupees' shall be inserted."

The amendment was adopted.

Mr. SPEAKER.—The question is :

"That clause 2, as amended stand part of the Bill."

The motion was adopted.

Clause 2, as amended was added to the Bill.

CLAUSE 3.

Mr. SPEAKER.—There is no amendment proposed to this clause. The question is :

"That clause 3, stand part of the Bill."

The motion was adopted.

Clauss 3, was added to the Bill.

CLAUSE 4.

Mr. SPEAKER.—There are 5 amendments to this clause.

Sri V. S. PATIL.—I do not intend to move the amendment.

Mr. SPEAKER.—Amendment No. 3.

Sri V. S. PATIL.—I move :

"That in clause 4, in line 2 of clause (a) of sub-section (5) of the proposed section 4, for the words 'thirty days' the words 'sixty days' shall be substituted."

Mr. SPEAKER.—Amendment moved :

"That in clause 4, in line 2 of clause (a) of sub-section (5) of the proposed section 4, for the words 'thirty days', the words 'sixty days' shall be substituted."

Sri VEERENDRA PATIL.—I accept the amendment.

The motion was adopted.

Mr. SPEAKER.—Next Amendment :

Sri H. R. KESHAVAMURTHY.—I beg to move:

"That in clause 4, in line 2 of item (i) of clause (a) of sub-section (2) of the proposed section 3, between the words 'work' and 'rupees', the words 'up to' shall be inserted."

Mr SPEAKER.—Amendment moved:

"That in clause 4, in line 2 of item (i) of clause (a) sub-section (2) of the proposed section 4, between the words 'work' and 'rupees', the words 'up to' shall be inserted."

Mr. SPEAKER.—Next Amendment may also be moved:

Sri H. R. KESHAVA MURTHY.—I beg to move:

"That in clause 4, in line 2 of clause (a) of sub-section (5) of the proposed section 4, for the words 'thirty days' the words 'sixty days' shall be substituted."

Mr. SPEAKER.—Amendment moved:

"That in clause 4, in line 2 of clause (a) of sub-section (5) of the proposed section 4, for the words 'thirty days' the words 'sixty days' shall be substituted."

Sri VEERENDRA PATIL.—I accept amendment No. 11.

Mr. SPEAKER.—I shall put amendment No. 3 to vote.

The question is:

"That in clause 4, in line 2 of clause (a) of sub-section (5) of the proposed section 4, for the words 'thirty days', the words 'sixty days' shall be substituted."

The amendment was adopted.

Mr. SPEAKER.—Next Amendment.

The question is:

"That in clause 4, in line 2, of item (i) of clause (a) of sub-section (2) of the proposed section 4, between the words "work" and "rupees", the words "up to" shall be inserted."

The amendment was negatived.

Mr. SPEAKER.—The question is:

"That clause 4, as amended, stand part of the Bill."

The motion was adopted.

Clause 4 was added to the Bill.

Clauses 5 and 6

Mr. SPEAKER.—The question is:

" That clauses 5 and 6, stand part of the Bill."

The motion was adopted

Clauses 5 and 6 were added to the Bill.

Clause 7

Mr. SPEAKER.—There is an amendment.

Sri V. S. PATIL.—Sir, I am not moving the amendment.

Mr. SPEAKER.—I put the clause. The question is:

" That clause 7 stand part of the Bill."

The motion was adopted.

Clause 7 was added to the bill.

Clauses 8 and 9

Mr. SPEAKER.—There are no amendments.

The question:

"That clauses 8 and 9 stand part of the Bill.'

The motion was adopted.

Clauses 8 and 9 were added to the Bill

Clause 5

Mr. SPEAKER.—There is an amendment.

Sri V. S. PATIL.—I beg to move:

"That in clause 1, at the beginning of sub-clause (2) the following words shall be added:

"for sub-section (3) of section 1 of the Principal Act, the following shall be substituted.'

Mr SPEAKER.—Amendment moved:

"That in clause at the beginning of sub-clause (2) the following words shall be added:

"for sub section (3) of section 1 of the Principal Act, the following shall be substituted."

†**Sri V. S. PATIL.**—Sir, so far as this amendment is concerned, I feel that at the time of drafting this Bill, there must be some mistake. Sub-section (2) of clause 1 reads thus :

"Sections 2, 3, 4, 5 and 6 shall be deemed to have come into force on the Thirty-first day of Octoher 1957, and sections 7, 8 and 9 shall come into force on the date of publication of this Act in the official Gazette."

But according to the Principal Act, Short Title and Preamble, section 1 sub-section (3) says that it shall come into force on such date as the Government by notification appoints. So, this sub-section (3) is in conflict with the present proposal that certain sections shall be deemed to have come into force on certain days and the remaining portion will come into force on the date of publication of this Act. So, sub-section (3) of section 1 of the original Act becomes redundant. So, in the place of that section this clause must be inserted there. Both of them cannot stand together in the bill after the amendment. This is a technical mistake that has appeared at the time of drafting and so my amendment will clarify the doubts that may be created subsequently.

Sri VEERENDRA PATIL.—Sir, I have got it examined. The amending Bill itself is quite clear and this is not necessary.

Mr. SPEAKER.—The question is :

"That in clause 1, at the beginning of sub-clause (2) the following words shall be added :

"for sub-section (3) of section 1 of the Principal Act, the following shall be substituted."

The amendment was negatived.

Mr. SPEAKER.—The question is :

"That clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri VEERENDRA PATIL.—Sir, I beg to move :

"That the Mysore Irrigation Levy of Betterment and Water Rate (Amendment) Bill, 1963, as amended be passed."

Mr. SPEAKER.—Before I put it to vote I want to request all the Members to forget the unhappy atmosphere that was there for a short time to-day in the House.

The question is:

"That the Mysore Irrigation (Levy of Betterment and Water Rate) (Amendment) Bill, 1963, as amended be passed.

The motion was adopted.

Mr. SPEAKER.—Before I declare the Bill as passed, I want to greet all the Members wishing them a very happy and prosperous New Year. Now I declare that the Bill is passed. The House is adjourned to assemble again at 8-30 A.M. on 2nd January 1964.

The House adjourned at Twenty Minutes past Six of the Clock to meet again at Thirty Minutes past Eight of the Clock on Thursday, the 2nd January 1964.

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE NINETY-EIGHTH DAY

OF THE

THIRD SESSION

THURSDAY, 2ND JANUARY 1964

Vol. III—No. 98

BANG

THE DIRECTOR O

UBLICATIONS AT THE

1964

Price : 25

CONTENTS

		Pages
Starred Questions and Answers	...	6593—6608
Questions for answers on the day (but not taken up)	...	6608—6609
Members' Representations	...	6609—6611
Statement by Hon'ble Minister for Education *re*: Strike in Hassan College	...	6611—6612
Papers laid on the Table—		
Twelfth List of Unstarred Questions and Answers	...	6612
Notification No HD 173 TMT 63, dated 2nd December 1963, issued under the Mysore Motor Vehicles Taxation Act, 1957	...	6626
Unstarred Questions and Answers	...	6612—6626
Fifth Report of the Committee an Private Member's Bills and Resolutions—(Adopted)	...	6626
Member's Representations	...	6626—6628
Chair's ruling *re*: moving of amendment by Minister concerned to a Bill as reported by Joint Select Committee	...	6628—6630
Business transacted during the Session	...	6630—6632
Business of the House	...	6633
Non-Official Resolution *re*: Appointment of a Committee to investigate into malpractices, etc., prevailing in Government, Semi-Government, Administrative and Corporate bodies—(Withdrawn)	...	6633—6658
House adjourned *sine die*	...	6658

MYSORE LEGISLATIVE ASSEMBLY.

NINETY-EIGTH DAY.

Thursday, 2nd January 1964

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given.)

Offic rs in the Veterinary and Animal Husbandry Departments deputed to the Mysore State from South Kanara, after integration.

* *Q.*— 1004. Sri C. V. VENKATARAYAPPA (Chickballapur).—

Will the Government be pleased to state :—

(*a*) the number of officers in the Veterinary and Animal Husbandry Departments who were deputed to the Mysore State from South Kanara after integration ;

(*b*) out of them, the number of officers sent to foreign countries for studies and the number of officers deputed for training in India ?

A.— Sri M. V. KRISHNAPPA (Minister for Revenue).—

(*a*) 31.

(*b*) Foreign Countries	..	8
In India	...	11

ಶ್ರೀ ಸಿ. ವಿ. ವೆಂಕಟರಾಯಪ್ಪ.—ಸೌತ್ ಕೆನರಾದವರು ಬಿಟ್ಟು ಮೈಸೂರು ಸಂಸ್ಥಾನದ ಉಳಿದ ಭಾಗದವರು ಎಷ್ಟು ಜನ ಫಾರಿನ್ ಕಂಟ್ರೀಸ್‌ಗೆ ಡೆಪ್ಯೂಟ್ ಆಗಿದ್ದಾರೆ ?

† ಶ್ರೀ ಎಂ. ವಿ. ಕೃಷ್ಣಪ್ಪ.—ಸಂಸ್ಥಾನದ ಎಲ್ಲಾ ಭಾಗಗಳೂ ಸೇರಿಕೊಂಡು ಒಟ್ಟು 40 ಜನರನ್ನು ಫಾರಿನ್ ಕಂಟ್ರೀಸ್‌ಗೆ ಕಳುಹಿಸಿದ್ದೇವೆ, 80 ಜನರನ್ನು ಇಂಡಿಯಾದೇಶದಲ್ಲೇ ಹೈಯರ್ ಪೋಸ್ಟ್ ಗ್ರ್ಯಾಜುಯೇಟ್ ಕೋರ್ಸ್ ಟ್ರೈನಿಂಗ್‌ಗೆ ಕಳುಹಿಸಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸೌತ್ ಕೆನರಾ ಮತ್ತು ಕೂರ್ಗ್‌ಗೆ ಇಲ್ಲಿ ಪ್ರಿಫರೆನ್ಸ್ ಕೊಟ್ಟಿದ್ದೀರಿ, ಇವರನ್ನು ಸೆಲೆಕ್ಟ್ ಮಾಡುವಾಗ ಯಾವ ತತ್ವ ಅನುಸರಿಸಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ವೆಟರ್ನರಿ ಟ್ರೈನಿಂಗ್ ಕೋರ್ಸ್ ಸೆಲೆಕ್ಟ್ ಮಾಡುವಾಗ ಯಾರ್ಯಾರ ಯಾವ ಯಾವ ಸಬ್ಜೆಕ್ಟ್‌ನಲ್ಲಿ ಟ್ರೈನ್ ಆಗಿರುತ್ತಾರೋ ಅವರನ್ನು ಆ ಸಬ್ಜೆಕ್ಟ್‌ನಲ್ಲಿ ಹೆಚ್ಚಿನ ಟ್ರೈನಿಂಗ್ ಪಡೆಯಲು ಸೆಲೆಕ್ಟ್ ಮಾಡುತ್ತಾರೆ, ಇದರಲ್ಲಿ ಸೌತ್ ಕೆನರಾದವರೇ ಹೆಚ್ಚಾಗಿ

† Indicates that the remarks or speeches have not been revised by the member concerned.

(ಶ್ರೀ ಎಂ. ವಿ. ಕೃಷ್ಣಪ್ಪ)

ಓದಿರಬಹುದು. ಅನಿಮಲ್ ಹಸ್ಬೆಂಡರಿ, ಡ್ಯೈರೀಯಿಂಗ್ ಇವೆಲ್ಲಾ ಬರುತ್ತವೆ. ಯಾವ ತತ್ವದ ಮೇಲೆ ಮಾಡುತ್ತಾರೆ ಎಂದರೆ ಅದಕ್ಕೆ ಒಂದು ಟೆಕ್ನಿಕಲ್ ಕಮಿಟಿ ಇದೆ ಅದರಲ್ಲಿ ಟೆಕ್ನಿಕಲ್ ಪೀಪಲ್ ಇರುತ್ತಾರೆ—ಡೈರೆಕ್ಟರ್ ಆಫ್ ಅನಿಮಲ್ ಹಸ್ಬೆಂಡರಿ, ಸೆಕ್ರೆಟರಿ ಆಫ್ ದಿ ಕನ್‌ಸರ್ನ್ಡ್ ಮಿನಿಸ್ಟ್ರಿ, ಅಗ್ರಿಕಲ್ಚರಲ್ ಡೈರೆಕ್ಟರ್ ಮತ್ತು ಯಾವ ದೇಶಕ್ಕೆ ಹೋಗುತ್ತಾರೋ ಆದೇಶದ ಒಬ್ಬ ಎಕ್ಸ್‌ಪರ್ಟ್ ಈ 4 ಜನರೂ ಆ ಕಮಿಟಿಯಲ್ಲಿ ಇರುತ್ತಾರೆ ಮತ್ತು ಅವರು ಇವರನ್ನ ಸೆಲೆಕ್ಟ್ ಮಾಡುತ್ತಾರೆ.

ಶ್ರೀ ಸಿ. ಆರ್. ರಂಗೇಗೌಡ — ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟಿನಲ್ಲಿರುವವರು ಕೆಲವರನ್ನು ಫಾರಿನ್‌ಗೆ ಕಳುಹಿಸಿ ಅವರು ಅಲ್ಲಿಂದ ವಾಪಸು ಬಂದಮೇಲೆ ಅವರು ಯಾವ ಸಬ್‌ಜೆಕ್ಟ್‌ನಲ್ಲಿ ತರಪೇತು ಪಡೆದು ಬಂದಿರುತ್ತಾರೋ ಆ ಸಬ್ಜೆಕ್ಟ್‌ನ್ನು ಕೊಡದೇ ಬೇರೆ ಸಬ್ಜೆಕ್ಟ್‌ಗೆ ಪೋಸ್ಟ್ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ — ಈಗ ನಮ್ಮ ಮುಂದೆ ಇರುವ ಪ್ರಶ್ನೆ ಇಂಟರ್ ಸ್ಟೇಟ್ ಯೂನಿವರ್ಸಿಟಿಗೆ ಒಂದು ಪ್ರೋಗ್ರಾಂ ಹಾಕಿಕೊಂಡು ಮೈಸೂರ್ ಸ್ಟೇಟ್ ನಲ್ಲಿ ರೂರಲ್ ಯೂನಿವರ್ಸಿಟಿ ಅಂತ ಹೇಳಿ ಒಂದು ಯೂನಿವರ್ಸಿಟಿ ಆಗುವುದು ಇದೆ. ರೂರಲ್ ಯೂನಿವರ್ಸಿಟಿ ಆದಾಗ ಆ ಕಾಲೇಜಿಗೆ ಬೇಕಾಗುವ ಟ್ರೈನಿಂಗ್ ಸ್ಟಾಫ್ ಏನಿದೆ ಅದಕ್ಕೆ ಟ್ರೈನಿಂಗ್‌ಗೋಸ್ಕರ ಅಮೆರಿಕಕ್ಕೆ ಹೋಗಿದ್ದಾರೆ, ಅವರು ವಾಪಸು ಬಂದ ಮೇಲೆ ಆ ಸಬ್ಜೆಕ್ಟ್‌ನಲ್ಲೇ ಅವರಿಗೆ ಕೆಲಸ ಕೊಡುತ್ತಾರೆ. ಹಿಂದೆ ತಾವು ಹೇಳಿರುವಂತೆ ನಡೆದಿರ ಬಹುದು ಕೆಲವು ಸಂದರ್ಭಗಳಲ್ಲಿ ಅವರು ಯಾವ ಸಬ್ಜೆಕ್ಟ್‌ನಲ್ಲಿ ಟ್ರೈನಿಂಗ್ ತೆಗೆದುಕೊಂಡಿದ್ದಾರೆ ಆ ಸಬ್ಜೆಕ್ಟ್ ಅದೇ ಡಿಪಾರ್ಟ್‌ಮೆಂಟ್‌ನಲ್ಲಿ ಸಿಕ್ಕಿಲ್ಲ, ಏಕೆಂದರೆ ಡ್ಯೆರೀಯಿಂಗ್‌ನಲ್ಲಿ 4 5 ಜನ ಎಕ್ಸ್‌ಪರ್ಟ್ಸ್ ಇರುತ್ತಾರೆ ಅವರೆಲ್ಲರಿಗೂ ಅದೇ ಕೆಲಸ ಸಿಕ್ಕುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್ — ವಿದೇಶಗಳಲ್ಲಿ ಟ್ರೈನಿಂಗ್‌ಗೆ ಹೋಗಿರುವವರಲ್ಲಿ ಡ್ಯೆರೀ ಫಾರ್ಮಿಂಗ್ ಸಲುವಾಗಿ ಹೋಗಿರುವವರು ಎಷ್ಟು ಜನ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿವರ ಇಲ್ಲ, ಈಗ ನಮ್ಮ ಮುಂದೆ ಇರುವುದು ಇನ್‌ಸ್ಟಿಟ್ಯೂಷನಲ್ ಅರೇಂಜ್‌ಮೆಂಟ್ ಪ್ರೋಗ್ರಾಂ ಅಂತ ಹೇಳಿ ರೂರಲ್ ಯೂನಿವರ್ಸಿಟಿ ಟೀಚಿಂಗ್ ಸ್ಟಾಫ್ ಟ್ರೈನಿಂಗ್ ಗೋಸ್ಕರ ಟೆನೆಸಿ ಯೂನಿವರ್ಸಿಟಿಗೆ ಹೋಗುತ್ತಾ ಇದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವರುಗಳ ಸೆಲೆಕ್ಷನ್ ಆದಮೇಲೆ ಅದು ಸರ್ಕಾರದ ಅಪ್ರೂವಲ್‌ಗೆ ಬರುತ್ತದೆ ಅಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ —ಹೌದು ಬಂದರೂ ಕೂಡ ನಾವೇನೂ ಮಾಡುವುದಕ್ಕಾಗುವುದಿಲ್ಲ, ಏಕೆಂದರೆ ಟೆಕ್ನಿಕಲ್ ಕಮಿಟಿ ಅವರು ಸೆಲೆಕ್ಟ್ ಮಾಡಿದ ಮೇಲೆ ಮಿನಿಸ್ಟರು ಏನೂ ಮಾಡುವುದಕ್ಕಾಗುವುದಿಲ್ಲ, ಮಿನಿಸ್ಟರು ಲೇಮ್ಯಾನ್, ಅದು ಟೆಕ್ನಿಕಲ್ ಸಬ್ಜೆಕ್ಟ್ ಆದ್ದರಿಂದ ಆ ಸಬ್ಜೆಕ್ಟ್‌ನಲ್ಲಿ ಯಾರ್‍ಯಾರು ಪರಿಣಿತರು, ಯಾರಾರಿಗೆ ಅನುಭವ ಇದೆ ಎಂಬುದನ್ನು ಮಿನಿಸ್ಟರು ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ, ಸಾಮಾನ್ಯವಾಗಿ ಅವರು ಹೇಳಿದ್ದನ್ನು ಒಪ್ಪಿಕೊಂಡುಬಿಡುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ಕೆಲವು ಅಧಿಕಾರಿಗಳನ್ನು ಫಾರಿನ್‌ಗೆ ಕಳುಹಿಸಿ ಅವರ ಲೀನ್ ಚೇಂಜ್ ಮಾಡಿ ಅವರ ಸ್ಥಾನದಲ್ಲಿ ಬೇರೆಯವರನ್ನು ನೇಮಕ ಮಾಡಿ ಪುನಃ ಅವರು ಅಲ್ಲಿಂದ ವಾಪಸು ಬಂದ ಮೇಲೆ ಅವರಿಗೆ ಅಲ್ಲಿ ಅವಕಾಶ ಮಾಡಿಕೊಡದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಂದಿದೆ, ನ್ಯಾಯ ಕೂಡ ದೊರಕಿಸಿ ಕೊಟ್ಟಿದ್ದೇವೆ, ಅವರು ವಾಪಸು ಬಂದ ನಾಲ್ಕೈದು ತಿಂಗಳಿನಲ್ಲೇ ಅವರ ಹಿಂದಿನ ಜಾಗ ಕೊಡಿಸಿಕೊಟ್ಟಿದ್ದೇವೆ.

